(ಶ್ರೀ ಬಿ. ಪುಟ್ಟಸ್ವಾಮಯ್ಯ)

ಹೆಣ್ಣುಮಕ್ಕಳ ಮಾನಭಂಗವಾಗದೇ ಇರುವ ಹಾಗೆ ನೋಡಿಕೊಳ್ಳಿ. ಇಂಥಾದಕ್ಕೆ ಅತಿ ಶಿಕ್ಷೆಯಾಗಿ ರಕ್ಷಣೆ ಕೊಡಿಸಬೇಕು. ಕೇಲವು ಸಂದರ್ಭಗಳಲ್ಲಿ ಗಂಡು ಮಕ್ಕಳಿಗೂ ಕಷ್ಟವಿದೆ. ಇಂಥಾದ್ದಕ್ಕೂ ಸರ್ಕಾರದವರು ರಕ್ಷಣೆ ಕೊಡಿಸಬೇಕು. ಹೆಣ್ಣು ಮಕ್ಕಳ ಕೇಸು ಇದ್ದರೆ, ಪೋಲೀಸಿನವರು ನಾನು ಮೊದಲು ನಾನು ಮೊದಲು ಎಂದು ಫಿರ್ಯಾದಿ ಹೋಗುವುದೂ ಉಂಟು. ಉದಾಹರಣೆಗೆ ಹೇಳ ಬೇಕೆಂದರೆ, ನಾನೇ ಹೆಣ್ಣು ಎಂದು ಇಟ್ಟುಕೊಳ್ಳಿ, ಯಾರು ದಿಕ್ಕಿಲ್ಲದೆ ಇರತಕ್ಕವನಾಗಿದ್ದೇನೆಂದರೆ, ಆಗ ಅಜೀಜ್ ಸೇಟ್ ಸಾಹೇಬರು ನನ್ನನ್ನು ಮುಟ್ಟುತ್ತಾರೆನ್ನೋಣ. ಆಗ ನಾನು ಆಸು ಸಾಹೇಬರಿಗೆ ಬರೆಯಬೇಕಾಗುತ್ತದೆ. ಅಂದಮೇಲೆ ಈಗ ಈ ವಿಚಾರವನ್ನು ನಿಮಗೆ ಬರೆಯದೆ ಇನ್ನು ಯಾರಿಗೆ ಬರೆಯಬೇಕು? 216 ಸದಸ್ಯರು ಇರತಕ್ಕ ಈ ಅಸೆಂಬ್ಲಿಯಲ್ಲಿ ಮೊದಲು ನಾನು ತಮಗೇ ಹೇಳಿಕೊಳ್ಳಬೇಕಾಗುತ್ತದೆ.

ಶ್ರೀ ಅಜೀಜ್ ಸೇಟ್.—ಈ ಸಭೆಯಲ್ಲಿ ಹಚ್ಚು ಸಂಖ್ಯೆಯಲ್ಲಿರುವ ಗಂಡಸರ ಮೇಲೆ ಈ ಸಭೆಯ ಅಧ್ಯಕ್ಷಣಿಯಾಗಿ ಒಬ್ಬ ಹೆಣ್ಣುಮಗಳು ಕಂಟ್ರೋಲ್ ಇಟ್ಟಿದ್ದಾರೆ. 54 ಕೋಟಿ ಜನಸಂಖ್ಯೆಯ ಮೇಲೆ ಒಬ್ಬ ಪ್ರಧಾನಮಂತ್ರಿ ಹೆಣ್ಣುಮಗಳು ಕಂಟ್ರೋಲ್ ಇಟ್ಟಿದ್ದಾರೆ. ಅಂದಮೇಲೆ ಲೇಡೀಸ್ ಅಷ್ಟು ಹೆಲ್ಪ್‌ಲೆಸ್ ಅಲ್ಲ. ಆದ್ದರಿಂದ ಮಾನ್ಯ ಸದಸ್ಯರು ಅಷ್ಟು ವಿಶೇಷವಾಗಿ ಇಂತಹ ವಿಷಯು ಗಳನ್ನು ಇಲ್ಲಿ ಹೇಳಬಾರದು.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಸದಸ್ಯರು ಮಾತನಾಡುತ್ತಾ ಗಂಡುಮಕ್ಕಳಿಗೂ ಕಷ್ಟವೆಂದು ಹೇಳಿದರು. ಅದು ಅರ್ಥವೇನೋ ಗೊತ್ತಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷಣಿಯವರೇ, ನಾನು ನಿನ್ನೆ ಒಂದು ಅಲ್ಪ ಕಾಲಾವಧಿ ಪ್ರಶ್ನೆಯನ್ನು ಕಳುಹಿಸಿದ್ದೇನೆ. ಅದು ಅತ್ಯಂತ ತುರ್ತಾಗಿ ಬರಬೇಕು. ನಮ್ಮ ರಾಜ್ಯದಲ್ಲಿ ಪೋಲೀಸ್ ಅಧಿಕಾರಿಗಳು ಯಾವ ರೀತಿಯಲ್ಲಿ ವರ್ತನೆ ಮಾಡುತ್ತಿದ್ದಾರೆಂಬ ಬಗ್ಗೆ ಮಾನ್ಯ ಗೃಹಮಂತ್ರಿಗಳು ಇಲ್ಲಿ ಸ್ಟೇಟ್‌ಮೆಂಟ್ ಕೊಡಬೇಕು. ನಾನು ಅದನ್ನು ಹಿಂದೆ ಒಂದು ಸಾರಿ ಒಂದು ತಿಂಗಳ ಹಿಂದೆಯೇ ಕಳುಹಿಸಿದ್ದೆ.

ಅಧ್ಯಕ್ಷರು.—ಅದನ್ನು ಆದಷ್ಟು ಬೇಗೆ ತರಿಸಿಕೊಡುತ್ತೇವೆ.

Mysore Khadi and Village Industries (Amendment) Bill, 1972

Motion to Consider—(Debate Contd.)

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು (ಶಾಂತಿನಗರ).—ನನ್ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಕೈಗಾರಿಕೆಯ ಮಂತ್ರಿಗಳು ತಂದಿರತಕ್ಕ 1972ನೇ ಇಸವಿಯ ಮೈಸೂರು ರಾಜ್ಯದ ಖಾದಿ ಮತ್ತು ಗ್ರಾಮೋದ್ಯೋಗಗಳ ತಿದ್ದುಪಡಿ ಮಸೂದೆಯನ್ನು ನಾನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದು ಬಯಸುತ್ತೇನೆ. ಈ ಖಾದಿ ಮತ್ತು ಗ್ರಾಮೋದ್ಯೋಗದ ಬಗ್ಗೆ ಈ ದೇಶದಲ್ಲಿ ಬೇಕಾದಷ್ಟು ಟೀಕೆ ಟಿಪ್ಪಣಿಗಳು ಬಂದಿವೆ. ಇದು ಕರ್ಮಕಾಂಡವೋ ಅಥವಾ ಮರ್ಮಕಾಂಡವೋ ಎಂಬುದು ನನಗೆ ಅರ್ಥವಾಗುತ್ತಾ ಇಲ್ಲ. ಅಂತೂ ಇಂತೂ ಈ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲ ಏನಿದೆಯೋ ಅದರ ಮೇಲೆ ಅಂತೂ ಅನೇಕ ಜನರು ಅನಾಥಾನ ಪಟ್ಟಿದ್ದಾರೆ. ಪೂಜ್ಯ ಗಾಂಧೀಜಿಯವರು ಇದು ಒಂದು "ರಚನಾತ್ಮಕ ಕಾರ್ಯಕ್ರಮವೆಂದು" ದೇಶಕ್ಕೆ ಸಾರಿದ್ದರು. ನಾವೂ ಸಹ ಕೆಲವು ದಿವಸಗಳವರೆಗೆ ಅದನ್ನು ಅನುಸರಿಸುತ್ತಲೇ ಬಂದಿದ್ದೇವೆ. ಇದರ ಉದ್ದೇಶ ಮುಖ್ಯವಾಗಿ ನೊಂದ ಜನ, ಬೆಂದ ಜನ ಕಂದಿದ ಜನ ಏನಿದ್ದಾರೆ ಅವರು ತಮ್ಮ ಜೀವನದ ವೃತ್ತಿಯನ್ನು ಅವಲಂಬಿಸುವುದಕ್ಕೋಸ್ಕರ ಈ ಒಂದು ಮಂಡಲಿಯಲ್ಲಿ ಸೇರಿಕೊಂಡು ಕೆಲಸ ಮಾಡುತ್ತಿದ್ದಾರೆ. ಅಂತಹವರು ಸೇಕಡ 80ರಷ್ಟು ಅನೇಕ ಗ್ರಾಮಗಳಲ್ಲಿದ್ದಾರೆ. ಅವರ ಜೀವನ ಮಟ್ಟ ಇಂದೂ ಸಹ ಹಾಗೆಯೇ ಉಳಿದಿದೆ. ನಾವು ಎಷ್ಟು ಪ್ರಯತ್ನಮಾಡಿದರೂ ಕೂಡ ಅವರ ಜೀವನಮಟ್ಟ ಏರಲಿಕ್ಕೆ ಸಾಧ್ಯವಾಗಿಲ್ಲ. ನಮಗೆಲ್ಲರಿಗೂ ಗೊತ್ತಿರುವ ಹಾಗೆ ಯೋಜನಾ ಆಯೋಗದವರು ಅವರ ಒಂದು ಯೋಜನೆಯ ಪ್ರಕಾರ ಈ ಬಾಬಿಗೆ ಸುಮಾರು 20 ಲಕ್ಷ ರೂಪಾಯಿ ಗಳನ್ನು ಖರ್ಚುಮಾಡಿದ್ದಾರೆ. ಆದರೂ ಸಹ ಈ ಒಂದು ವ್ಯತ್ತಿಯಲ್ಲಿರುವವರ ನಿರುದ್ಯೋಗ

ಸಮಸ್ಯೆ ಹಾಗೆಯೇ ಉಳಿದಿದೆ. ರಾಷ್ಟ್ರಪಿತ ಪೂಜ್ಯ ಗಾಂಧೀಜಿಯವರು ಹೇಳಿದಂತೆ ಖಾದಿ ಮತ್ತು ಗ್ರಾಮೋದ್ಯೋಗವೆಂಬುದು ಹಿಂದಿನ ಹಳೆಯ ಕಂದಾಚಾರದ ಪದ್ಧತಿಯಾಗಿದ್ದರೂ ಆ ಒಂದು ಕೈಗಾರಿಕೆಗೆ ಯಾವತ್ತಾದರೂ ಜನ ಹೆಚ್ಚು ಪ್ರೋತ್ಸಾಹ ಹಾಗೂ ಪ್ರಾಶಸ್ತ್ಯ ಕೊಡಬೇಕೆಂದು ನಾನು ಸಲಹೆಮಾಡುತ್ತೇನೆ. ಎಣ್ಣೆ, ಗಂಧ, ಗುಡಿ ಹಾಗೂ ಕಾಗದ ಮತ್ತು ಬೆಂಕಿಪಟ್ಟಿಗೆ ಮುಂತಾದ ಗೃಹ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವುದರಿಂದ ಅನೇಕ ಜನರ ಆರ್ಥಿಕ ಸ್ಥಿತಿ ಸುಭದ್ರವಾಗಿರುತ್ತದೆ. ಈ ಒಂದು ಉದ್ದೇಶದಿಂದ ಅವರು ಮಾಡಿದ್ದರೂ ಈಗ ಏನಾಗಿದೆಯೆಂದರೆ, ಕೆಲವು ವ್ಯಕ್ತಿಗಳು ಆ ಮಂಡಲಯಲ್ಲಿ ಸೇರಿ ಯಾವ ಒಂದು ಮೂಲೋದ್ದೇಶವಿಶ್ವೋ ಅದನ್ನು ಸಾಧಿಸುವುದಕ್ಕೆಂದು ಹೋಗಿ ಸ್ವಕಾರ್ಯ ಧುರೀಣರಾಗಿದ್ದಾರೆ. ಆದಕ್ಕಿಂದಲೇ ಇವತ್ತು ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ಬಗ್ಗೆ ಅನೇಕ ಟೀಕೆ ಟಿಪ್ಪಣಿಗಳು ಕೇಳಿಬರುತ್ತಿವೆ. ನನ್ನ ಮಿತ್ರರು ಈ ಖಾದಿ ಪ್ರಾಮುಖ್ಯತೆಯ ಹಾಗೂ ಪವಿತ್ರತೆಯ ಬಗ್ಗೆ ವರ್ಣಿಸಿದ್ದಾರೆ. ಖಾದಿ ಅಂದರೆ ಕಾಕಿ ಅಥವಾ ಕಾವಿ ಎಂತಲೂ, ದಿ ಎಂದರೆ ಪವಿತ್ರತೆ ಎಂತಲೂ ಹೇಳಿದ್ದಾರೆ. ಅಂದಮೇಲೆ ಖಾದಿ ಅಂದರೆ ಕಾಕಿ ಅಥವಾ ಕಾವಿ ಬಟ್ಟೆಗಳ ಪವಿತ್ರತೆಯನ್ನು ಹೇಳಿರುವುದು ಅಕ್ಷರಶಃ ನಿಜ. ಈಗಿರತಕ್ಕ ನಂದರ್ಭದಲ್ಲಿ ನನ್ನ ಸಲಹೆ ಏನೆಂದರೆ, ಯಾವ ಈ ಖಾದೀ ಬೋರ್ಡ್ ಇದೆಯೋ ಅದನ್ನು ಸರಿಯಾಗಿ ವಿಚಾರ ಮಾಡಿ ಅದರಲ್ಲಿರತಕ್ಕ ಲೋಪದೋಷಗಳನ್ನು ಕೂಡಲೇ ತೆಗೆದುಹಾಕುವದಕ್ಕೆ ನಮ್ಮ ಕೈಗಾರಿಕೆಯ ಮಂತ್ರಿಗಳು ತಂದಿರತಕ್ಕ ತಿದ್ದುಪಡಿ ಕಾರ್ಯೋಚಿತವಾಗಿದೆ. ಆ ಬೋರ್ಡಿನಿಂದ ಕೊಟ್ಟಿರತಕ್ಕ ಸಾಲದ ಹಣವನ್ನು ಸರಿಯಾಗಿ ವಸೂಲುಮಾಡುತ್ತಾ ಇಲ್ಲವೆಂದು ತಿಳಿದು, ಈ ಒಂದು ತಿದ್ದುಪಡಿಯನ್ನು ಇಲ್ಲಿ ತಂದಿದ್ದಾರೆ. ಈ ತಿದ್ದುಪಡಿ ಪ್ರಕಾರ ಒಬ್ಬ ಫೈನಾನ್‌ಷಿಯರ್ ಅಡ್ವೈಜರ್ ಹಾಗೂ ಒಬ್ಬ ಚೀಫ್ ಅಕೌಂಟ್ಸ್ ಆಫೀಸರ್‌ನ್ನು ಅವರು ಅಲ್ಲಿಗೆ ನೇಮಕ ಮಾಡಬೇಕಾಗಿದೆ. ನಮ್ಮಲ್ಲಿ ಒಂದು ಪದ್ಧತಿ ಬಂದುಹೋಗಿದೆ. ಸಾಮಾನ್ಯವಾಗಿ ಕೊಟ್ಟ ಹಣ ಕೊಡಲಿಕ್ಕೆ ನಾವು ಯಾವಾಗಲೂ ತಯಾರಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಇಡೀ ಭಾರತದೇಶದಲ್ಲಿ ಜನ ಹಣವನ್ನು ತೆಗೆದುಕೊಳ್ಳುವುದರಲ್ಲಿ ಬಹಳ ಬುದ್ಧಿವಂತರು. ತೆಗೆದುಕೊಂಡ ಹಣವನ್ನು ಹಿಂದಕ್ಕೆ ಕೊಡುವಾಗ ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ಒಂದು ಸರ್ವಜ್ಞನ ಶ್ಲೋಕವೇ ಇದೆ. ಅದೇನೆಂದರೆ, 'ಸಾಲವನು ಕೊಂಬಾಗ ಪಾಲೋಗರುಂಬಂತೆ, ಸಾಲಿಗರು ಬಂದ ದೆಳೆವಾಗ ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ' ಎಂಬುದನ್ನು ಬಹಳ ಹಿಂದೆಯೇ ಸಾರಿದ್ದಾರೆ. ಇದನ್ನು ಇವತ್ತಿನವರೆಗೂ ಅನುಸರಿಸುತ್ತಲೇ ಬಂದಿದೆ. ಈಗ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯಲ್ಲಿರತಕ್ಕ ದರಿದ್ರನಾರಾಯಣರನ್ನು ತೆಗೆಲಿಸಬೇಕಾದರೆ ನಾವು ಮೊದಲು ಸುಸಂಸ್ಕೃತರಾಗಬೇಕು. ಉತ್ತಮವಾಗಿ ಸೇವೆಯನ್ನು ಸಲ್ಲಿಸುವುದಕ್ಕೆ ಮನ ಕೊಡಬೇಕು. ಹೀಗಿರುವಾಗ ನನ್ನ ಸಲಹೆ ಏನೆಂದರೆ, ಅಲ್ಲಿ ಯಾವ ಕಾರಣದಿಂದ ರಾಜಕೀಯ ಆಗಿದೆಯೋ ಗೊತ್ತಿಲ್ಲ. ಅಲ್ಲಿ ಅಂಥಾದ್ದಕ್ಕೆ ಅವಕಾಶ ಕೊಡದೆ ಅದನ್ನು ಪುನಃ ರೀಕಾನ್‌ಸ್ಟಿಟ್ಯೂಟ್ (Reconstitute) ಮಾಡಿದರೆ ಒಳ್ಳೆಯದು. ಈಗಿರತಕ್ಕ ಖಾದಿ ಬೋರ್ಡನ್ನು ನೂಪರ್‌ಸೀಡ್ ಮಾಡಿದರೆ ರಿಕವರಿ ಆಫ್ ಲೋನ್ಸ್ ಬಗ್ಗೆ ಎಫೆಕ್ಟಿವ್ ಫಂಕ್ಷನ್ ಆಗುವ ರೀತಿಯಲ್ಲಿ ಮಾಡುವುದಕ್ಕೆ ಅವಕಾಶವಾಗುತ್ತದೆ ಅದಕ್ಕೆ ಎಷ್ಟೋ ಪ್ರಯತ್ನ ಮಾಡುತ್ತಿದ್ದರೂ ಏಕೆ ಇದುವರೆಗೆ ಫಲಕಾರಿಯಾಗಲಿಲ್ಲವೆಂದು ನಾನು ಕೇಳುತ್ತೇನೆ? ಅದಕ್ಕೆ ಕಾರಣ ಲ್ಯಾಕ್ ಆಫ್ ಟ್ರೈನ್ಡ್ ಪರ್ಸನೆಲ್ ಅಲ್ಲಿ ಇದ್ದಾರೆಂದು ನನಗೆ ಕಾಣುತ್ತದೆ. ನಾವು ಈಗ ಆಧುನಿಕ ಯುಗದಲ್ಲಿದ್ದೇವೆ. ಈ ಕೈಗಾರಿಕೆಯು ಯುಗದಲ್ಲಿ ಮಾಡರನ್ ಸೈನ್ಸ್ ಅಂಡ್ ಟೆಕ್ನಾಲಾಜಿ ನಮ್ಮ ದೇಶದ ವಾತಾವರಣಕ್ಕೆ ಸರಿಹೋಗುತ್ತದೆನ್ನುವ ಅಭಿಲಾಷೆ ನನಗೆ ಉಂಟು. ಈ ಯೋಜನೆಗಳು ಇನ್ನೂ ಗ್ರಾಮಾಂತರ ಪ್ರದೇಶಗಳಿಗೆ ಹೋಗಿಲ್ಲ ಎಂಬುದನ್ನು ನಾನು ಘಂಟಾಘೋಷವಾಗಿ ಹೇಳಬಯಸುತ್ತೇನೆ. ಸುಮಾರು 24 ಸಹಸ್ರ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ನಾಲ್ಕನೆಯ ಯೋಜನೆಯಲ್ಲಿದ್ದರೂ ಅದಿನ್ನೂ ಗ್ರಾಮಾಂತರ ಪ್ರದೇಶಗಳಿಗೆ ಹೋಗಿಯೇ ಇಲ್ಲ. ಅದಿನ್ನೂ ತಾಲ್ಲೂಕು ಮಟ್ಟದಲ್ಲಿ ಹಾಗೂ ಡಿಸ್ಟ್ರಿಕ್ಟ್ ಮಟ್ಟದಲ್ಲಿಯೇ ಇದೆ. ಕೆಲವು ಅಧಿಕಾರಿಗಳು ಕೊಟ್ಟಿರತಕ್ಕ ಅಂಕಿ ಅಂಶಗಳು ಬರೀ ಪೇಪರ್‌ನಲ್ಲಿಯೇ ಇದೆ. ಕಾರ್ಯರೂಪಕ್ಕೆ ಬಂದಿಲ್ಲ. ನನ್ನ ಸಲಹೆ ಏನೆಂದರೆ hereafter-war s we have to plan with the people. ಅಂದರೆ ಜನಸಮುದಾಯದೊಡನೆ ಪ್ಲಾನ್ ಹಾಕಬೇಕು. ಆದ್ದರಿಂದ ಖಾದಿ ಮತ್ತು ಗ್ರಾಮೋದ್ಯೋಗಗಳಲ್ಲಿ ನಿರತರಾಗಿರುವವರು ಹೆಚ್ಚುಮಂದಿ ಕೇವಲ ಗ್ರಾಮಗಳಲ್ಲಿಯೇ ವಾಸವಾಗಿರುವುದರಿಂದ, ಕಮ್ಮಾರರು, ಬಡಗಿಯವರು, ನೇಯ್ಗೆಯವರು, ಕುಂಬಾರರು, ಇತ್ಯಾದಿ ಇತ್ಯಾದಿ, ಜನಗಳು ಈ ಗ್ರಾಮ ಉದ್ಯೋಗಗಳನ್ನೇ ಅವಲಂಬಿಸಿರುವುದರಿಂದ ಇಂತಹ ಉದ್ಯೋಗಿಗಳವರಿಗೆ ನಾವು ಹೆಚ್ಚು ಉತ್ತೇಜನವನ್ನು ಕೊಡಬೇಕು. ನಾನು ಮೊದಲೇ ಹೇಳಿದ ಹಾಗೆ "ಟ್ರೈನ್ಡ್ ಪರ್ಸನೆಲ್" ಅವರನ್ನೇ" ನೇಮಿಸಬೇಕು. ಈ ನಂದರ್ಭದಲ್ಲಿ ನಾನು ಮತ್ತೊಂದು ಸೂಚನೆಯನ್ನು ಕೊಡಬಯಸುತ್ತೇನೆ. ಈಗ ಈ ಗ್ರಾಮೋ

(ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು)

ದ್ಯೋಗಗಳ ಬಗ್ಗೆ ''ಒಂದು ಟ್ರೈನಿಂಗ್ ಇನ್‌ಸ್ಟಿಟ್ಯೂಟನ್ನು'' ಇಟ್ಟರೂ ತಪ್ಪಾಗುವದಿಲ್ಲ. ಈ ಒಂದು ಆಧುನಿಕ ಯುಗದಲ್ಲಿ ಅನೇಕ ವಿಷಯಗಳಲ್ಲಿ ಟ್ರೈನಿಂಗ್ ಮಾಡುವ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗಳಿವೆ. ಅದೇ ತರಹದಲ್ಲಿ ಈ ಗ್ರಾಮೋದ್ಯೋಗ ಏನಿದೆ ಅದನ್ನು ಆಧುನಿಕ ರೀತಿಯಲ್ಲಿ ಆನುಸರಿಸುವ ಹಾಗೆ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಒಂದನ್ನು ಕೂಡಲೇ ತೆಗೆದರೆ ಬಹಳ ಒಳ್ಳೆಯದಾಗುತ್ತದೆಂದು ನನ್ನ ಅಶೆ ಇದೆ. ಡೀಸೆಂಟ್ರಲೈಜೇಷನ್ (Decentralization) ಆಫ್ ಇಂಡಸ್ಟ್ರೀಸ್ ಏನಿದೆಯೋ ಅದನ್ನು ಎರಾ ಕಡೆಯೂ ಮಾಡಬೇಕೆಂದು ಅನೇಕರು ಹೇಳುತ್ತಿದ್ದಾರೆ. ನಮ್ಮ ಈ ಒಂದು ನಗರದಲ್ಲಿಯೇ ಆ ಒಂದು ವಿಚಾರ ಯಾವ ರೀತಿಯಾಗುತ್ತಿದೆಂಬುದು ಗೊತ್ತಾಗುತ್ತದೆ ಅದಕ್ಕೆ ನಮ್ಮ ಸಾಧನೆಯೇ ಮೂಲ ಕಾರಣ. ಹಿಂದೆ ಬೆಂಗಳೂರು ಪಟ್ಟಣದ ಜನಸಂಖ್ಯೆ ಎಷ್ಟು ಲಕ್ಷ ಇದ್ದುದು ಇವತ್ತು ಸುಮಾರು 20 ಲಕ್ಷಕ್ಕೆ ಮುಟ್ಟಿದೆಯೆಂದು ಹೇಳಬಹುದು. ಯಾವ ರೀತಿಯಲ್ಲಿ ಕಲ್ಕತ್ತ, ಬೊಂಬಾಯಿ, ಮುಂತಾದ ಪಟ್ಟಣಗಳಿವೆಯೆಂಬುದನ್ನು ನೋಡಬೇಕು. ಆದರೆ ನಮ್ಮ ರಾಜ್ಯದಲ್ಲಿ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಡ ಜನಗಳು ತಮ್ಮ ಬಡತನದಿಂದ ಬೆಂದು, ಕಂದುಹೋಗಿ, ಸುಣ್ಣವಾಗಿ ಬಹಳ ಕಷ್ಟದಿಂದ ಪಟ್ಟಣವನ್ನು ಬಂದು ಸೇರುತ್ತಿದ್ದಾರೆ. ಈ ರೀತಿಯಾಗಿ ಅಲ್ಲಿನ ಜನಗಳು ನಿರ್ಧಾರ ಮಾಡಿರುವುದೇ ಬಹಳ ಜಾಸ್ತಿಯಾಗಿದೆ. ಆದರೆ ಪಟ್ಟಣಗಳಲ್ಲಿ ಜನಸಂಖ್ಯೆ ಬೆಳೆಯುತ್ತಾ ಹೋದಷ್ಟು ತೊಂದರೆಗಳೇ ಜಾಸ್ತಿಯಾಗುತ್ತಿವೆ. ಸ್ಲಂ ಕ್ಲಿಯರೆನ್ಸ್ ಆಗಿಲ್ಲ. ಬಹಳ ಜಾಸ್ತಿ ಇದೆ. ಪಟ್ಟಣಗಳಲ್ಲಿ ಬೇಕಾದಷ್ಟು ಸಮ್ಸ್ ಇರುವದರಿಂದಲೇ ಬಹಳ ಜನರು ಇಲ್ಲಿ ಬಂದು ಸೇರುವುದಕ್ಕೆ ಕಾರಣವಾಯಿತು. ಅನೇಕ ಬಡ ಜನರು ಉಪವಾಸದಿಂದ ಸಹ ಸುಣ್ಣವಾಗುತ್ತಿದ್ದಾರೆ. ಆದ್ದರಿಂದ ಇಂತಹ ತೊಂದರೆಗಳನ್ನು ತಪ್ಪಿಸಬೇಕಾದರೆ ಗ್ರಾಮ ಕೈಗಾರಿಕೆಗಳಿಗೆ ನಮ್ಮ ಸರ್ಕಾರದವರು ಹೆಚ್ಚಿಗೆ ಪ್ರಾಶಸ್ತ್ಯ ಕೊಡಬೇಕು. ಕಾಟೇಜ್ ಇಂಡಸ್ಟ್ರಿ ಯಾವ ರೀತಿ ಇದೆ ಅದನ್ನು ಸರ್ಕಾರದವರು ಕೂಡಲೇ ಡೆವಲಪ್ ಮಾಡಬೇಕು. ಇದರಿಂದ ಪಟ್ಟಣಗಳೂ ಹೆಚ್ಚಿಗೆ ಬೆಳೆಯುತ್ತವೆ. ಡೀಸೆಂಟ್ರಲೈಜೇಷನ್ ಆಫ್ ಇಂಡಸ್ಟ್ರೀಸ್ ಮಾಡಬೇಕಾದರೆ ಮಾನ್ಯ ಪೂಜ್ಯ ಗಾಂಧೀಜಿಯವರು ಹೇಳಿದ ಹಾಗೆ ಖಾದಿ ಗ್ರಾಮೋದ್ಯೋಗ ಒಂದು ಶಸ್ತ್ರವೆಂದು ನಾನೂ ಹೇಳಬಯಸುತ್ತೇನೆ. ಇದರ ಜೊತೆಗೆ ಖಾದಿ ಗ್ರಾಮೋದ್ಯೋಗ ಮಂಡಲ ಅಥವಾ ಖಾದಿ ಕಮಿಷನ್ನಿನಿಂದ ಜನರಿಗೆ ಗ್ರಾಂಟ್ ಕೊಡುವುದಾದರೆ, ಆ ಹಣವನ್ನೂ ಮತ್ತು ಸರ್ಕಾರದವರು ಕೊಡತಕ್ಕ ಹಣವನ್ನೂ ಸರಿಯಾದ ರೀತಿಯಲ್ಲಿ ಖರ್ಚು ಮಾಡುವುದಕ್ಕೆ ಏರ್ಪಾಡುಮಾಡಬೇಕು. ಅದನ್ನು ಮನಗಂಡೇ ಕೈಗಾರಿಕೆಯ ಮಂತ್ರಿಗಳು ಈ ಬೋರ್ಡಿನಿಂದ ಕೂಡತಕ್ಕ ಸಾಲವನ್ನು ಸರಿಯಾಗಿ ವಸೂಲುಮಾಡಿರುವಲೆಕ್ಕವನ್ನು ನೋಡಲು ಒಬ್ಬ ಆಡಿಟರ್ ಅವರನ್ನು ನೇಮಿಸುತ್ತಿದ್ದಾರೆ. ಇದರಿಂದ ಅಲ್ಲಿಂದ ಕೊಟ್ಟಂಥ ಹಣ ಬೋರ್ಡಿಗೆ ವಾಪಸ್ಸು ಬಂದಿಲ್ಲವೆಂಬುದು ಚೆನ್ನಾಗಿ ಅರ್ಥವಾಗುತ್ತದೆ. ಇಂತಹ ಒಂದು ಮಿಷನರಿಯನ್ನು ನರಮಾಡಬೇಕಾದರೆ ನಿಷ್ಕಾಮವಂತ ಹಾಗೂ ಮಾರ್ಗದರ್ಶನವಾಗಿರತಕ್ಕ ವ್ಯಕ್ತಿಗಳನ್ನು ಅಂತಹ ಸಂಸ್ಥೆಗಳಿಗೆ ಆರಿಸಿ ಈಗಿರತಕ್ಕ ಖಾದಿಬೋರ್ಡ್ ಏನಿದೆಯೋ ಅದನ್ನು ರೀಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ಒತ್ತಿ ಹೇಳುತ್ತೇನೆ. ಆದರ ಜೊತೆಗೆ ಪ್ರತಿವರ್ಷ ಈ ಸರ್ಕಾರ ಸ್ವಾತಂತ್ರದ ಬೆಳ್ಳಿ ಹಬ್ಬವನ್ನು ಆಚರಿಸಿರುವುದರಿಂದ, ಈವರ್ಷದಲ್ಲಿ ಸರ್ಕಾರದವರು ಸಾರ್ವಜನಿಕರ ಸಹಕಾರದಿಂದ ಈ ಖಾದಿಮತ್ತು ಗ್ರಾಮೋದ್ಯೋಗಗಳನ್ನು ಉತ್ತೇಜನಪಡಿಸಬೇಕು. ಯಾವ ರೀತಿಯಲ್ಲಿ ಪರ ಸಂಸ್ಥಾನಗಳು ಆದಂಥ ಪಂಜಾಬು ಮತ್ತು ಹರಿಯಾನ ಪ್ರದೇಶಗಳಲ್ಲಿ ಈ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಬೆಳೆಸುತ್ತಿದ್ದಾರೊ ಆದೇ ರೀತಿಯಲ್ಲಿ ನಾವೂ ಬೆಳೆಸಬೇಕು. ಮೈಸೂರು ಮೊದಲಿನಿಂದಲೂ ಕೈಗಾರಿಕೆಯಲ್ಲಿ ಬಹಳ ಒಳ್ಳೆಯ ಹೆಸರನ್ನು ಗಳಿಸಿದೆ. ಇದಕ್ಕೆ ಹಿಂದೆ ಗಂಧರನಾಡು, ಚಿನ್ನದ ನಾಡು ಎಂಬ ಹೆಸರಿತ್ತು. ಈ ರೀತಿಯಲ್ಲಿ ಸೊಬಗಿಗೆ ಹೆಸರಾದಂಥ ಈ ನಾಡಿನಲ್ಲಿ ಇರತಕ್ಕ ಕಲಾಕೌಶಲ್ಯಗಳನ್ನು ನೋಡಿದರೆ, ಪ್ರತಿಯೊಬ್ಬರಿಗೂ ಬಹಳ ಆಶ್ಚರ್ಯವಾಗುತ್ತದೆ. ಇಂತಹ ಕುಶಲಕಲೆಗಳ ಪ್ರಗತಿ ನಮ್ಮ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿದ್ದರೂ ಅವನ್ನು ಹೊರಗಡೆಗಳಲ್ಲಿ ಯಾರೂ ಪ್ರದರ್ಶನ ಮತ್ತು ಪ್ರತಿನಿಧಿಸುತ್ತಾ ಇಲ್ಲ. ಕೇವಲ ಟೂರಿಸ್ಟ್‌ಗಳು ಸಾಂತರುಗಳಲ್ಲಿ ಮಾತ್ರ ನಮ್ಮ ಉಡಿಗೆ ತೊಡಿಗೆಗಳನ್ನೂ ಮತ್ತು ನಮ್ಮ ಕಲಾಕೌಶಲ್ಯಗಳನ್ನು ನೋಡುತ್ತಿದ್ದೇವೆ. ಆದರಿಂದ ನಮ್ಮ ನೆರೆಕೊರೆಯ ರಾಷ್ಟ್ರಗಳಲ್ಲಿ ಯಾವ ರೀತಿಯಲ್ಲಿ ಗ್ರಾಮಾಂತರ ಕೈಗಾರಿಕೆಗಳಿಗೆ ಹಾಗೂ ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹ ಹಾಗೂ ಉತ್ತೇಜನಗಳನ್ನು ಕೊಡುತ್ತಿದ್ದಾರೋ ಅದೇ ರೀತಿಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯು ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿಯೂ ಉತ್ತೇಜನ ಕೊಡಲು ಕೈಗಾರಿಕಾ ಮಂತ್ರಿಗಳು ಕೂಡಲೆ ತಕ್ಕ ಕ್ರಮಗಳನ್ನು ತೆಗೆದು ಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ. ಇದರ ಜೊತೆಗೆ ಕ್ಯಾಂಗ್ರೆಸ್ ಪಕ್ಷದವರು ಯಾರು

ಇವ್ವಾರೆ, ಮತ್ತು ಗಾಂಧೀಜಿ ಭಕ್ತರು ಯಾರು ಇದ್ದಾರೆಯೋ ಅವರು ಈ ವಿಷಯದಲ್ಲಿ ಹೆಚ್ಚು ಮನಸ್ಸಿಟ್ಟು ಕೊಡಬೇಕು. ಮೊದಲಿನಿಂದಲೂ ನಾವೇನು ಖಾದಿ ಮತ್ತು ಗ್ರಾಮೋದ್ಯೋಗ ಒಂದೇ ಎಂಬ ಕೂಗಿಗೆ ಮನ್ನಣೆಯನ್ನು ಕೊಟ್ಟಿದ್ದೆವೋ ಅದು ಈಗ ನಾನಾ ಕಾರಣಗಳಿಂದ ಹಿಂದೆ ಬೀಳುತ್ತಿದೆಯೆಂಬುದನ್ನು ನಾವು ನೋಡುತ್ತಿದ್ದೇವೆ. ಅದರ ಬೆಳವಣಿಗೆಯನ್ನೂ ಸಹ ನಾವು ಮಾಡಿಯುತ್ತಿದ್ದೇವೆ. ಅದಕ್ಕೆ ನಿಜವಾಗಿ ಅನ್ವಯ ಕೊಡಬಾರದೆಂದು ಈ ಸಂದರ್ಭದಲ್ಲಿ ಮತ್ತೊಮ್ಮೆ ನಾನು ಸರ್ಕಾರಕ್ಕೆ ಒತ್ತಿಹೇಳಲು ಇಷ್ಟ ಪಡುತ್ತೇನೆ. ಈ ಖಾದಿ ಮತ್ತು ಗ್ರಾಮೋದ್ಯೋಗದ ಬಗ್ಗೆ ನಾನು ಏಷ್ಟು ಹೇಳಿದರೂ ತೀರದು. ಇದನ್ನು ನಿಜವಾಗಿ ಸರಿಪಡಿಸಬೇಕಾದರೆ, ಸುಸಂಸ್ಕೃತರಾದ ಹಾಗೂ ನಿಷ್ಠಾವಂತರಾದ ಜನರನ್ನು ಅಲ್ಲಿ ಹಾಕಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ ಈ ಮಂಡಲಿಯ ಪುನರ್ರಚನೆ ಮಾಡಬೇಕೆಂದು ಒತ್ತಿ ಹೇಳಿ, ನನಗೆ ಇಷ್ಟು ಹೊತ್ತು ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

" ಜೈಹಿಂದ್ "

ಶ್ರೀ ಟಿ. ಎಂ. ಮಂಜುನಾಥ (ತಿಪಟೂರು).—ನನ್ಮಾನ್ಯ ಅಧ್ಯಕ್ಷರೇ, ಕೈಗಾರಿಕಾ ಮಂತ್ರಿಗಳು ಖಾದಿ ಮತ್ತು ಗ್ರಾಮೋದ್ಯೋಗದ ತಿದ್ದುಪಡಿ ಮಸೂದೆಯನ್ನು ಈ ಸಭೆಯಲ್ಲಿ ತಂದಿದ್ದಾರೆ. ಅಲ್ಲಿ ಕೇವಲ ಎರಡು ವರ್ಗದ ಅಧಿಕಾರಿಗಳನ್ನು ಕೂಡಲೇ ನೇಮಿಸಬೇಕೆಂದು ತಂದಿದ್ದಾರೆ. ಅಲ್ಲಿ ನಾನಾ ವಿಧವಾದ ಅನ್ಯಾಯಗಳು ನಡೆಯುತ್ತಿವೆ ಎಂಬ ಅಭಿಪ್ರಾಯವನ್ನೂ ಸಹ ವ್ಯಕ್ತಪಡಿಸಿದ್ದಾರೆ. ಈ ಖಾದಿ ಮತ್ತು ಗ್ರಾಮೋದ್ಯೋಗ ಯೋಜನೆ ಏನಿದೆಯೋ ಇದು ನಮ್ಮ ದೇಶದಲ್ಲಿ ಪ್ರಧಾನ ಪಾತ್ರವನ್ನು ತಂದಿರತಕ್ಕ ಒಂದು ಯೋಜನೆ ಈ ದಿವಸ ಇದನ್ನು ತಂದಿರುವ ಉದ್ದೇಶ ವಾದರೂ ಇಷ್ಟೆ. ಗ್ರಾಮಗಳಲ್ಲಿ ಅನೇಕ ಉದ್ಯೋಗಗಳನ್ನು ಮಾಡತಕ್ಕ ಬಡಜನತೆ ಈ ದಿವಸ ನಿರುದ್ಯೋಗಿಗಳಾಗಿ ತಂತಮ್ಮ ಜೀವನಮಟ್ಟವನ್ನು ಸುಧಾರಿಸಿಕೊಳ್ಳಲು ಆಗದೆ ಅವರ ಕಷ್ಟಗಳನ್ನು ಸಹಿಸದೇ ಇರುವುದರಿಂದ ಅವರ ಒಂದು ಆರ್ಥಿಕ ಮಟ್ಟವನ್ನು ಉತ್ತಮಪಡಿಸಲು ಹಾಗೂ ಅವರೂ ಸಹ ಸಮಾಜದಲ್ಲಿ ಉತ್ತಮವಾಗಿ ಬಾಳುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಡಲು ಇಂತಹ ಯೋಜನೆಗೆ ಪ್ರೋತ್ಸಾಹ ಕೊಡಬೇಕೆಂದು ಈ ಮಸೂದೆಯನ್ನು ತಂದಿದ್ದಾರೆ. ಇಂತಹ ಯೋಜನೆ ನಮ್ಮ ದೇಶದಲ್ಲಿ ಪ್ರಪ್ರಥಮವಾಗಿ ಬಂದಾಗ ಬಹಳ ಉತ್ಸಾಹವಿಕೆಯಿಂದ, ಉತ್ಸುಕತೆಯಿಂದ ಅನೇಕರು ಕೆಲಸಮಾಡುತ್ತಿದ್ದರು. ಗ್ರಾಮಾಂತರದಲ್ಲಿರತಕ್ಕ ಜನರು ಬಹಳ ಚೆನ್ನಾಗಿ ಕೆಲಸಮಾಡಿಕೊಂಡು ಹೋಗುತ್ತಿದ್ದರು. ಆದರೆ ಅಲ್ಲಿರತಕ್ಕ ಅಧಿಕಾರಿಗಳು ಈ ಮಂಡಲಿಯ ಸಂಪರ್ಕವನ್ನು ಬೆಳೆಸಿಕೊಂಡು ಅಲ್ಲಿನ ಕೆಲಸಕಾರ್ಯಗಳನ್ನು ಸರಿಯಾಗಿ ಮಾಡದೆ ಸ್ವಾರ್ಥಿಗಳಾಗಿ ಅಲ್ಲಿನ ಆಡಳಿತವನ್ನು ಕುಂಠಿತವಾಗಿ ಮಾಡಿರತಕ್ಕಂಥ ಅಂಶವನ್ನು ನಾವು ಈಗ ನೋಡಬೇಕಾಗಿದೆ. ಬಹುಮುಖ್ಯವಾಗಿ ಸ್ವದೇಶಿ ವಸ್ತುಗಳನ್ನು ತಯಾರು ಮಾಡುವ ಯೋಜನೆ ಏನಿದೆ ಅದಕ್ಕೆ ನವ ಚೈತನ್ಯವನ್ನು ಕೊಟ್ಟು ಜನ ಹೆಚ್ಚು ಉತ್ಸುಕತೆಯಿಂದ ಕೆಲಸಮಾಡುವ ಹಾಗೆ ಸಂಬಂಧಪಟ್ಟ ಮಂತ್ರಿಗಳು ಗಮನವನ್ನು ಕೊಡಬೇಕಾಗಿದೆ. ಈಗತಾನೆ ಹಿರಿಯ ಸದಸ್ಯರು ಇವರ ಬಗ್ಗೆ ಪೂಜ್ಯ ಗಾಂಧೀಜಿಯವರ ಉದ್ದೇಶ ಕುರಿತು ಬಹಳ ಚೆನ್ನಾಗಿ ಮಾತನಾಡಿದರು. ನಾನು ಕಳಕಳಿಯಿಂದ ಒಂದು ಪ್ರಶ್ನೆ ಮಾಡುತ್ತೇನೆ. ಯಾರು ಗಾಂಧೀಜಿಯವರ ತತ್ವಗಳನ್ನು ಅನುಷ್ಠಾನಕ್ಕೆ ತರತಕ್ಕಂಥವರಾಗಿದ್ದಾರೋ ಅವರು ಮೊದಲು ಖಾದಿ ಬಟ್ಟೆಯನ್ನು ಧರಿಸಲಿ. ನಾವು ಸ್ವದೇಶಿ ವಸ್ತುಗಳನ್ನು ಉಪಯೋಗಿಸಲು ಇಷ್ಟಪಡದೆ ಅನ್ಯರು ಉಪಯೋಗಿಸಲಿ ಎಂದು ಹೇಳುವುದು ಹಾಸ್ಯಾಸ್ಪದಕರ.

11-00 A.M.

ಇವತ್ತು ಯಾರು ಸ್ವದೇಶೀ ವಸ್ತುಗಳಿಗೆ ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳುತ್ತಾರೊ ಅಂಥವರು ಕಾರ್ಯತಃ ಅದನ್ನು ತಮ್ಮ ಜೀವನದಲ್ಲಿ ಜಾರಿಗೆ ತರಬೇಕು. ಆಗ ಮಾತ್ರ ನಮ್ಮ ಸ್ವದೇಶಿ ಬಟ್ಟೆಗಳಿಗೆ ಹೆಚ್ಚಿನ ಉತ್ತೇಜನ ದೊರೆತಂತಾಗುತ್ತದೆ. ಮತ್ತು ಹಳ್ಳಿಗಳಲ್ಲಿರತಕ್ಕಂತಹ ಜನರಿಗೆ ಹೆಚ್ಚು ಉದ್ಯೋಗಾವಕಾಶಗಳು ದೊರೆತು ನಮ್ಮ ವಸ್ತುಗಳಿಗೂ ಹೆಚ್ಚು ಮಾರುಕಟ್ಟೆ ದೊರೆಯುತ್ತದೆ. ಅದೇ ರೀತಿ ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚು ಸ್ವದೇಶಿ ವಸ್ತುಗಳನ್ನು ತಯಾರುಮಾಡಿ ಪರದೇಶಗಳಿಗೆ ರಫ್ತು ಮಾಡುವಂತ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಬಹುಶಃ ನಮ್ಮ ಯುವಕ ಮಂತ್ರಿಯವರು ಇದರ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಿ ಅದನ್ನು ಮಾಡುತ್ತಾರೆಂದು ನಂಬಿದ್ದೇನೆ. ಇವತ್ತು ಬಹುಮುಖ್ಯವಾಗಿ ಗಾಣಿಗರ, ಬಡಗಿಯವರ ಮತ್ತು ಕುಂಬಾರ ಜನಾಂಗದವರ ಪರಿಸ್ಥಿತಿ ತುಂಬಾ

(ಶ್ರೀ ಟಿ. ಎಂ. ಮಂಜುನಾಥ್)

ಶೋಚನೀಯವಾಗಿದೆ. ನಾವು ಇವತ್ತು ಕೇವಲ ಅಧಿಕಾರಿ ವರ್ಗದವರನ್ನು ಬದಲಾವಣೆ ಮಾಡಿದರೆ ಸಾಲದು. ಯಾರು ಹಳ್ಳಿ ಹಳ್ಳಿಗಳಲ್ಲಿ ಗ್ರಾಮ ಸೇವಕರಾಗಿ ಕೆಲಸಮಾಡುತ್ತಾರೋ, ಅಂಥ ಜನರಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಅದೇ ರೀತಿ ಗ್ರಾಮಾಂತರ ಪ್ರದೇಶಗಳಲ್ಲಿ ಸಂಪರ್ಕವನ್ನು ಇಟ್ಟುಕೊಂಡಿರತಕ್ಕ ಅಧಿಕಾರಿಗಳಿಗೆ ಈ ಕೆಲಸವನ್ನು ಒದಗಿಸಿ ಕೊಟ್ಟರೆ ಬಹಳ ಪ್ರಯೋಜನ ವಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಇವತ್ತು ಎಷ್ಟೋ ಜನರಿಗೆ ಈ ಸಂಸ್ಥೆಯಿಂದ ಎಂತೆಂಥ ಪ್ರಯೋಜನವಾಗುತ್ತದೆ ಎಂಬುದು ಗೊತ್ತಿಲ್ಲ. ಆ ತಿಳಿವಳಿಕೆ ಬರಬೇಕಾದರೆ, ಇದರ ಪ್ರಚಾರವನ್ನು ಹಳ್ಳಿ ಹಳ್ಳಿಗಳಲ್ಲಿಯೂ ವಿಸ್ತರಿಸಿ ಇದರ ಉಪಯೋಗದ ಅರಿವನ್ನು ಜನರಿಗೆ ಮಾಡಿಕೊಡಬೇಕು. ಆದ್ದರಿಂದ ಮಂತ್ರಿಯವರು ಇದರ ಬಗ್ಗೆ ಹೆಚ್ಚಿನ ಗಮನಕೊಟ್ಟು ಹಳ್ಳಿ ಹಳ್ಳಿಗಳಲ್ಲಿ ಪ್ರಚಾರಮಾಡಿ ಇದರ ಬಗ್ಗೆ ಮೊದಲು ಏನೊಂದು ಒಳ್ಳೆಯ ಭಾವನೆ ಇತ್ತೋ ಅದೇ ಭಾವನೆ ಈಗಲೂ ಮೂಡುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪೂಜ್ಯ ಮಹಾತ್ಮ ಗಾಂಧಿಯವರು ಇದನ್ನು ಪ್ರಾರಂಭ ಮಾಡಿದಾಗ ತುಂಬಾ ಆಶೆಯನ್ನು ಇಟ್ಟುಕೊಂಡು ಮಾಡಿದರು. ಇದರಿಂದ ಹಳ್ಳಿಗಳಲ್ಲಿರುವ ಬಡ ಜನರಿಗೆ ಅನುಕೂಲವಾಗಲಿ, ಅವರ ಜೀವನಮಟ್ಟ ಉತ್ತಮಗೊಳ್ಳಲಿ ಮತ್ತು ಸ್ವದೇಶಿ ಮಾಲುಗಳ ಕನಬುದಾರರಿಗೆ ಉತ್ತೇಜನ ದೊರಯಲಿ ಎಂದು ಅವರು ಮಾಡಿದರು. ಕೆಲವು ಸದಸ್ಯರು ಅಲ್ಲಿರುವ ಎಲ್ಲರನ್ನೂ ಬದಲಾವಣೆ ಮಾಡಿದರೆ ಇದು ಸರಿಹೋಗುತ್ತದೆ ಎಂದು ಸೂಚನೆಯನ್ನು ಮಾಡಿದರು. ಆದರೆ ನಾನು ಅದನ್ನು ಒಪ್ಪುವುದಿಲ್ಲ. ಯಾರೇ ಆಗಲಿ ಯಾರು ದಕ್ಷತೆಯಿಂದ ಕೆಲಸ ಮಾಡುತ್ತಾರೆ ಅಂಥ ಜನರಿಗೆ ಉತ್ತೇಜನ ಕೊಡಬೇಕು, ಆದ್ದರಿಂದ ಮಾನ್ಯ ಮಂತ್ರಿಯವರು ಈ ಇಲಾಖೆಯ ಬಗ್ಗೆ ಜನರಲ್ಲಿ ಏನೊಂದು ಭಾವನೆ ಇದೆ ಅದನ್ನು ಹೋಗರಾಡಿಸುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ, ಅವುಗಳನ್ನು ತೆಗೆದುಕೊಂಡು ಇದನ್ನು ಒಂದು ಉತ್ತಮಮಟ್ಟಕ್ಕೆ ತರಬೇಕೆಂದು ಹೇಳಿ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಗಳೆ, ಈ ಸದನದ ಮುಂದಿರತಕ್ಕಂತಹ ಖಾದೀ ಗ್ರಾಮೋದ್ಯೋಗಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಈ ಇಲಾಖೆಯು ಮೊದಲು ಯಾವ ಉದ್ದಿಶ್ಯದಲ್ಲಿ ಪ್ರಾರಂಭವಾಯಿತೋ, ಅದನ್ನು ಮರೆತು, ಈಗ ಕುಂಠಿತವಾಗುತ್ತಾ ಇದೆ. ಇದು ನಮ್ಮ ಬಡ ಜನರ ದುರಾದೃಷ್ಟವೆಂದು ಹೇಳಿದರೆ ತಪ್ಪಾಗಲಾರದು. ಇವೊತ್ತಿನ ದಿವಸ ನಮ್ಮ ಜನರು ದಿನೇ ದಿನೇ ಉತ್ತಮವಾಗಿರತಕ್ಕಂತಹ ಮತ್ತು ನೈಸರ್ಗಿಕರತಕ್ಕಂತಹ ತಳಕು ಬಟ್ಟೆಗಳಿಗೆ ಮಾರು ಹೋಗುತ್ತಾ ಇರತಕ್ಕಂತಹ ಸಮಯದಲ್ಲಿ ನಮ್ಮ ಖಾದಿ ಬಟ್ಟೆಗಳಿಗೆ ಮಾರುಕಟ್ಟೆಯೇ ಇಲ್ಲದಂತಾಗಿದೆ. ಅದೂ ಅಲ್ಲದೆ ಈ ಒರಟು ಬಟ್ಟೆಗಳಿಗೆ ಬೆಲೆಯು ಮಿಲ್ ಬಟ್ಟೆಗಳಿಗಿಂತ ಜಾಸ್ತಿಯಾಗಿರುವುದರಿಂದ ಜನರು ಹೆಚ್ಚು ಕೊಂಡುಕೊಳ್ಳುವುದಿಲ್ಲ. ಆದ್ದರಿಂದ ಸರ್ಕಾರದವರು ಇನ್ನೂ ಹೆಚ್ಚಿನ ಸಬ್ಸಿಡಿಯನ್ನು ಇದಕ್ಕೆ ಕೊಟ್ಟು ಮಿಲ್ ಬಟ್ಟೆಗಳಿಗಿಂತಲೂ ಕಡಿಮೆ ಬೆಲೆಯಲ್ಲಿ ಜನರಿಗೆ ದೊರಕುವಂತೆ ಮಾಡಿದರೆ, ಸ್ವಲ್ಪ ಮಟ್ಟಿಗಾದರೂ ಇದನ್ನು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಅದರಲ್ಲೂ ಹಳ್ಳಿಗಳಲ್ಲಿ ತಯಾರಾಗತಕ್ಕಂತಹ ಬಟ್ಟೆಗಳಿಗೆ ಹೆಚ್ಚಿನ ಆದ್ಯತೆ ಕೊಡದಿದ್ದರೆ ಅಲ್ಲಿರತಕ್ಕಂತಹ ಬಡ ಜನರ ಮತ್ತು ಕೂಲಿಗಾರರ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರವು ಆದಷ್ಟು ಹೆಚ್ಚು ಗ್ರಾಮೋದ್ಯೋಗದಿಂದ ತಯಾರಾಗತಕ್ಕ ಪದಾರ್ಥಗಳಿಗೆ ಪ್ರಾಶಸ್ತ್ಯವನ್ನು ಕೊಟ್ಟು ಇನ್ನೂ ಇದನ್ನು ಅಭಿವೃದ್ಧಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಅದೇ ರೀತಿಯಲ್ಲಿ ಈ ಗೃಹ ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕ ಜನರಿಗೆ ಬಂಡವಾಳ ಹಾಕಲು ಸಾಲದ ರೂಪದಲ್ಲಿ ಹಣ ಸಹಾಯವನ್ನು ಒದಗಿಸಿಕೊಡಬೇಕು. ನಮ್ಮ ಪೂಜ್ಯ ಗಾಂಧೀಜಿಯವರು ಖಾದಿಯನ್ನು ಧರಿಸಬೇಕೆಂಬ ಮಂತ್ರದ ಉಪದೇಶ ಮಾಡಿದ್ದು ಸಹ ಇದೇ ಉದ್ದೇಶದಿಂದ. ಹಳ್ಳಿಗಾಡಿನ ಜನರಿಗೆ ಹೆಚ್ಚಿನ ಕೆಲಸಕಾರ್ಯ ಸಿಕ್ಕಿ, ಅವರ ಉದ್ಧಾರವಾಗಲಿ ಎಂದು ಮಾಡಿದ್ದಾರೆ. ಇವತ್ತು ಕಾರ್ಖಾನೆಗಳಲ್ಲಿ ಯಂತ್ರವನ್ನು ಒಬ್ಬನೇ ನಡೆಸಬಹುದು; ಆದರೆ ಈ ಕೈಗಾರಿಕೆಗಳಲ್ಲಿ ಕೆಲಸ ಮಾಡಬೇಕಾದರೆ, ಹಲವಾರು ಜನರು ಬೇಕಾಗುತ್ತದೆ. ಇದರಿಂದ ಸೆಟ್ಟು ಜನರಿಗೆ ಗೃಹಕೈಗಾರಿಕೆಯಲ್ಲಿ ಪ್ರೋತ್ಸಾಹ ಕೊಟ್ಟ ಹಾಗೆ ಆಗುತ್ತದೆ. ಈ ತತ್ವವನ್ನೇ ಗಾಂಧೀಜಿಯವರು ಸಾರಿದ್ದುದು. ಆದ್ದರಿಂದ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಸರ್ಕಾರದವರು ಕೊಡಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

†Sri C. M. ARUMUGAM (K.G.F.).—Madam Speaker, I support this Bill for the simple reason that the Government have thought that they should have some control over the finances of the Khadi and Village Industries Board. All this time this Board had no control. It spent lakhs of rupees and no proper accounts were maintained by the Board. Loans were granted to several Societies but they were not recovered. In fact, not only the Societies disappeared but in certain cases, the members also disappeared. Therefore, at least now Sri Krishna thought of exercising certain control over this Board and also regulating the functions of the Secretary, the Financial Adviser, Accounts Officer and Chief Accounts Officer. He has also made provision in the Bill for placing the Rules framed under this Act on the floor of the House.

At the outset, Sri S. M. Krishna stated that I was not wearing Khadi. Well I accept it. It is a matter of regret that the ruling party also relaxed the rules of the Party and stated that its members need not necessarily wear Khadi. Thus the encouragement shown to village industries has been lost by this relaxation. In fact, Congres men were quoting Mahatma Gandhi in this connection. People have forgotten him. Even the members of the Congress Party have forgotten him long-long time back. So, it is no good linking him with the khadi and village industries. Madam, the exodus of rural population to Cities is increasing now. In order to avoid that and make the villagers live in villages, they should start village industries in villages. It is a matter of regret that the Khadi and Village Industries Board has not been able to cater to their needs or deliver the goods. It is a pity that some times that persons who had no background of khadi and village industries and who did not know the functions of the Board, were appointed as Chairman of the Board. Such persons have continued as Chairmen for three to four years. The result is that they have bungled the affairs of the Board and there have been mis-managements, misappropriations and frauds. In order that the Board may becom more effective and meaningful, more village industries should be started so that villagers may not move out to cities in search of jobs and means of livelihood. The village population is purely depending upon agriculture. There are hundreds and thousands in rural parts who are working as tenants and agricultural labourers. In order to provide them permanent jobs and assured income it is better that Government treats this Board as a departmental undertaking. There must be a separate Joint Director and Director for Khadi and Village Industries. We are having a Director and several Assistant Directors for Industries and Commerce but there is no body who is qualified in the Khadi and Village Industries Board. It is not only necessary to control finance but also to look into the performance of the Khadi Board. It is said all these years that all the money given to this Khadi Board both by the Khadi

(SRI C. M. ARUMUGAM)

Commission and the Government has not been properly used. In this connection I am reminded of one remark. An Officer asked his subordinate as to what happened to the stock of iron and steel. The subordinate said that they were eaten away by white ants. Like that in the Khadi Board the white ants have been eating files, properties and funds. There is a clause in this Bill which says that loans given to the institutions can be recovered as arrears of land revenue. To do this, it may be possible in future; but what about the past? It is possible to recover whatever loans you have so far given. Some of the societies have not been functioning at all. It is impossible to recover. Therefore instead of regulating the finances in future, I suggest to the Minister that they must convert this as a departmental undertaking and appoint a Director so that he can start more and more industries in the villages.

You must inculcate in the minds of the general public to wear Khadi; there should not be any compulsion. Infact there are instructions that the menials should use only Khadi. Instead of giving concessions to the Khadi Board they can as well give concessions to the Khadi Industry. Now-a-days people do not wear Khadi because they want synthetic fibres like Terene, Teryline, etc. Secondly Khadi is costly and the durability also is poor. Therefore khaddar cloth should be made cheap so that poor people can wear.

Madam SPEAKER.—How has it to be made? The Hon'ble Member may have concrete suggestions.

Sri C. M. ARUMUGAM.—They are giving concession to the Khadi Board. The Khadi Commission gives funds; Mysore Government gives funds. Now attention made towards production is very little. They must pay more attention. I submit that the Khadi Board and Village Industries Board must be abolished. At present a defeated person in the election or a retired politician or a politician who does not know anything of the Khadi Board is appointed as Chairman and is allowed to continue for three or four years. You should fix a period and only qualified person should be made the Chairman of the Board. I suggest to the Minister that he should take up this question with the department concerned and appoint only persons who have qualifications, knowledge and interest in the work so that the people may be benefited by it.

† ಶ್ರೀ ಸಿ. ಬೈರೇಗೌಡ (ಮೇಮಗಲ್). ಮಾನ್ಯ ಅಧ್ಯಕ್ಷರೇ, ಮಾನ್ಯ ಕೈಗಾರಿಕಾ ಶಾಖೆಯ ಮಂತ್ರಿಗಳು ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ನಿಬಂಧನೆಗೆ ಸಂಬಂಧ ಪಟ್ಟ ಹಾಗೆ ಕೆಲವು ತಿದ್ದುಪಡಿಗಳನ್ನು ಏನು ಈ ಸಭೆಯ ಮುಂದೆ ತಂದಿದ್ದಾರೆ ಅವು ಬಹಳ ಅವಶ್ಯಕ. ಅವು ತಿದ್ದುಪಡಿ ಆಗಬೇಕಾಗಿತ್ತು. ಆದರಿಂದ ನಾನು ಈ ತಿದ್ದುಪಡಿಯನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಇಲ್ಲಿಯವರೆಗೂ ಖಾದಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಯಲ್ಲಿ ಅನೇಕ ದುರ್ವ್ಯವಹಾರಗಳು ನಡೆದಿವೆ. ಈ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೂ ಕೂಡ ಸರ್ಕಾರದವರು ಇದರ ಮೇಲೆ ರಾಜ

ಕೀಯು ಉದ್ದೇಶಗಳಿಂದ ಯಾವ ಒಂದು ನಿಬಂಧನೆಯನ್ನು ಹಾಕವೇ ಇದ್ದುದರಿಂದ ಅವರಲ್ಲಿ ಕೋಟ್ಯಾಂತರ ರೂಪಾಯಿಗಳು ಲುಕ್ಸಾನಾಗಿ ಹಾಳಾಗಿದೆ. ಆದರೂ ಕೂಡ ನರ್ಕಾರದವರು ಏತಕ್ಕೆ ಕಣ್ಮುಮುಚ್ಚಿಕೊಂಡು ಕುಳಿತುಕೊಂಡಿದ್ದಾರೆಯೆ ನೀ ಗೊತ್ತಿಲ್ಲ. ಈಗಾಗಲೇ ನನ್ನ ಮಿತ್ರರು ಹೇಳಿದಹಾಗೆ ಯಾರು ರಾಜಕೀಯದಲ್ಲಿ ವಿಫಲರಾಗಿದ್ದಾರೆಯೋ, ಯಾರಿಗೆ ರಾಜಕೀಯದಲ್ಲಿ ಜಾಗ ವಿಲ್ಲವೋ ಅಂಥವರನ್ನು ಈ ಖಾದಿಬೋರ್ಡಿಗೆ ಅಧ್ಯಕ್ಷರನ್ನಾಗಿ ನೇಮಿಸುತ್ತಾರೆ. ಅವರು ತಮ್ಮ ಒಂದು ಸ್ವಾರ್ಥಕ್ಕಾಗಿ ಸಾಮಾನ್ಯ ಜನತೆಯ ಹಣವನ್ನು, ಕಾರ್ಮಿಕರ ಹಣವನ್ನು, ರೈತರ ಹಣವನ್ನು ಯಥೇಚ್ಛವಾಗಿ ಪೋಲು ಮಾಡುತ್ತಿದ್ದಾರೆ. ಈ ರೀತಿಯಾಗಿ ಅವರು ಖರ್ಚು ಮಾಡಿದಂತಹ ಹಣಕ್ಕೆ ಕೋಟ್ಯಾಂತರ ರೂಪಾಯಿಗಳಿಗೆ ಲೆಕ್ಕವಿಲ್ಲದಂತಾಗಿದೆ. ಇದು ದುರದೃಷ್ಟಕರವಾದ ಪ್ರಸಂಗ ಮಹಾತ್ಮಾ ಗಾಂಧೀಜಿಯವರ ಹೆಸರನ್ನು ಹೇಳತಕ್ಕ, ಖಾದಿಯ ವಿಷಯವನ್ನು ತಿಳಿದು ಅರ್ಥ ಮಾಡಿಕೊಂಡು ಮಂತ್ರವನ್ನು ಜಪಿಸತಕ್ಕ ಜನ ಖಾದಿ ಬೋರ್ಡಿನ ಹಣವನ್ನು ದುರುಪಯೋಗ ಮಾಡಿದ್ದಾರೆ. ಇದು ನಿಜವಾಗಿಯೂ ಶೋಚನೀಯ ವಿಚಾರ. ಇವೊತ್ತು ಇದನ್ನು ಸರ್ಕಾರ ಸರಿಪಡಿಸಬೇಕು ಎಂದು ಹೊತಿರತಕ್ಕದ್ದು ಖಂಡಿತವಾಗಿಯೂ ಶ್ಲಾಘನೀಯ ವಿಚಾರ. ಆದರೆ ಇವೊತ್ತು ದೇಶದಲ್ಲಿ ಖಾದಿ ಮಂಡಲಿಯು ಅವಶ್ಯಕತೆ ಇದೆಯೋ ಇಲ್ಲವೋ ಎನ್ನುವ ಯೋಚನೆ ಮಾಡಬೇಕಾಗಿದೆ. ಏತಕ್ಕೆಂದರೆ ದೇಶದಲ್ಲಿ ವಾತಾವರಣ ಬದಲಾಗುತ್ತಿದೆ. ಇವೊತ್ತು ದೇಶದಲ್ಲಿ ಜನತೆಯ ಮನೋಭಾವನೆ ಬದಲಾವಣೆಯಾಗುತ್ತಿದೆ. ಇಂಥಾ ಒಂದು ಬದಲಾವಣೆಯ ಪರಿಸ್ಥಿತಿಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ ಇರಬೇಕೇ ಎಂಬುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ನಮ್ಮ ಮಿತ್ರರು ಹೇಳಿದ ಹಾಗೆ ಮೊದಲು ಖಾದಿಯನ್ನು ಧರಿಸುತ್ತಿದ್ದವರು ಇವೊತ್ತು ಬಿಚ್ಚಿರುವ ಪರಿಸ್ಥಿತಿ ಕಾಣುತ್ತಿದೆ. ದೇಶದಲ್ಲಿ ಫ್ಯಾಷನ್ ಬದಲಾವಣೆಯಾಗುತ್ತಿದೆ. ಹೀಗಿರುವಾಗ ಖಾದಿಯನ್ನು ತಯಾರು ಮಾಡಿ ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವ ಅವಶ್ಯಕತೆ ಇಲ್ಲ ಎಂದು ನನ್ನ ಭಾವನೆ. ಇವೊತ್ತಿನ ತಾಂತ್ರಿಕ ಯುಗದಲ್ಲಿ ಕಾಂಪಿಟಿಷನ್ ಇರುವ ಸ್ಥಿತಿಯಲ್ಲಿ ಇಷ್ಟು ಹಣವನ್ನು ಈ ಖಾದಿ ಉತ್ಪಾದನೆಗೆ ಖರ್ಚು ಮಾಡುವುದು ಸರಿಯಲ್ಲ. ಖಾದಿ ಬೋರ್ಡ್ ಎನ್ನುವ ಹೆಸರನ್ನು ತೆಗೆದು ವಿಲೇಜ್ ಇಂಡಸ್ಟ್ರಿ ಬೋರ್ಡ್ ಎಂದು ಮಾಡಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗ ಜಾಸ್ತಿ ಇರುವುದರಿಂದ ಅವರಿಗೆ ಉದ್ಯೋಗವನ್ನು ಒದಗಿಸಬೇಕಾದರೆ ಅಲ್ಲಲ್ಲಿ ಉದ್ಯೋಗಗಳನ್ನು ದೊರಕಿಸುವಂತಹ ಅವಕಾಶಗಳನ್ನು ಹೆಚ್ಚು ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಜನಗಳಿಗೆ ಒಂದು ಹೆಚ್ಚಿನ ಉದ್ಯೋಗವನ್ನು ದೊರಕಿಸಲು ವಿಲೇಜ್ ಇಂಡಸ್ಟ್ರಿ ಮಖಾಂತರ ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣಪುಟ್ಟ ಕೈಗಾರಿಕೆಗಳನ್ನು ಸ್ಥಾಪನೆಮಾಡಿ ಕೆಲವು ಅವಶ್ಯಕವಾದ ವಸ್ತುಗಳನ್ನು ಉತ್ಪನ್ನ ಮಾಡುವುದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟರೆ ಅದರಿಂದ ಹೆಚ್ಚಿನ ಪ್ರಯೋಜನವಾಗುತ್ತದೆ. ಸರ್ಕಾರವಾಲೀ ಅಥವಾ ಯಾವುದೇ ಸಂಸ್ಥೆಯಾಗಲೀ ಆ ರೀತಿ ಮಾಡುವುದಾದರೆ ಅವರು ಕೊಟ್ಟಂತಹ ಹಣ ಸದ್ವಿನಿಯೋಗವಾಗುತ್ತದೆ. ಆದ್ದರಿಂದ ಈಗ ಇರತಕ್ಕಂಥಾ ಖಾದಿ ಬೋರ್ಡ್ ಏನದೆ ಅದನ್ನು ವಿಲೇಜ್ ಇಂಡಸ್ಟ್ರಿ ಬೋರ್ಡ್ ಎಂದು ಬದಲಾಯಿಸಿದರೆ ಒಳ್ಳೆಯದು ಎಂದು ನಾನು ಭಾವಿಸುತ್ತೇನೆ. ಇಲ್ಲಿಯವರೆಗೂ ಈ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯಲ್ಲಿ ದುರ್ವ್ಯವಹಾರಗಳು ನಡೆದಿವೆ ; ಅವುಗಳನ್ನು ನ್ಯಾಯ ಮಂಡಲಿಯ ಮೂಲಕ ತನಿಖೆ ನಡೆಸಿ, ವಿಚಾರಣೆ ನಡೆಸಿ ಆ ಹಣ ಎಲ್ಲಿ ಎಲ್ಲಿ ಹೋಯಿತು ಅದಕ್ಕೆ ಯಾರು ಜವಾಬ್ದಾರರು ಎಂಬುದನ್ನು ಜನತೆಗೆ ತಿಳಿಸುವುದು ಸೂಕ್ತ. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

†ಶ್ರೀ ಎಸ್. ಎಂ. ಕೃಷ್ಣ (ಕೈಗಾರಿಕಾ ಶಾಖೆಯ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೇ, ನೆನ್ನೆಯಿಂದ ಈ ಖಾದಿ ಮಂಡಲಿಯ ಬಗ್ಗೆ ತೀಕ್ಷ್ಣವಾದಂಥ ಭಾಷಣಗಳು ಈ ಸಭೆಯ ಮಾನ್ಯ ಸದಸ್ಯರಿಂದ ಬಂದಿದೆ. ಜೊತೆಗೆ ನಾನು ಮಂಡಿಸಿರತಕ್ಕಂಥ ಈ ತಿದ್ದುಪಡಿಗೆ ಸಾರ್ವತ್ರಿಕ ವಾದಂಥ ಬೆಂಬಲ ಸೂಚಿತವಾಗಿರುವುದಕ್ಕಾಗಿ ನಾನು ಈ ಸಭೆಯ ಮಾನ್ಯ ಸದಸ್ಯರುಗಳಿಗೆ ಆಭಾರಗಳನ್ನು ಸಮರ್ಪಣ ಮಾಡುತ್ತಿದ್ದೇನೆ. ನಮ್ಮ ದೇಶದಲ್ಲಿ ಬೆಳೆದು ಬೃಹದಾಕಾರವಾಗಿ ನಿಂತಿರತಕ್ಕಂಥ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪಮಟ್ಟಿಗಾದರೂ ಕೂಡ ಕಡಿಮೆ ಮಾಡಿದ್ದರೆ ಅದಕ್ಕೆ ನಮ್ಮ ದೇಶದಲ್ಲಿ ಬೆಳೆದುಬಂದಿರತಕ್ಕಂಥ ಖಾದಿ ಗೃಹ ಕೈಗಾರಿಕೆ ಕ್ಷೇತ್ರ ಬಹಳಮಟ್ಟಿಗೆ ಕಾರಣ ಅನ್ನತಂಕ್ಕಥದ್ದನ್ನು ಈ ಮಾನ್ಯ ಸಭೆಯು ಒಪ್ಪುತ್ತದೆ ಎಂದು ನಾನು ಭಾವನೆ ಮಾಡುತ್ತೇನೆ. ಖಾದಿ ಮತ್ತು ಕೈಮಗ್ಗ ಇವುಗಳು ಇಲ್ಲದೆ ಹೋಗಿದ್ದರೆ ಈಗಾಗಲೇ ಬಹುತೇಕವಾಗಿ

(ಶ್ರೀ ಎಸ್. ಎಂ. ಕೃಷ್ಣ)

ಬೆಳೆದಿರತಕ್ಕಂಥ ಹಳ್ಳಿಗಾಡಿನ ನಿರುದ್ಯೋಗಿಗಳ ಸಂಖ್ಯೆ ಇನ್ನೂ ಅಖಂಡವಾಗಿ ಬೆಳೆಯುತ್ತಿತ್ತು ಎಂಬುದನ್ನು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕಾಗಿದೆ. ಕೇಂದ್ರ ಮತ್ತು ರಾಜ್ಯಸರ್ಕಾರಗಳು ವಿಶೇಷವಾಗಿ ಖಾದಿ ಬೆಳವಣಿಗೆ ಬಗ್ಗೆ, ಖಾದಿ ಕೈಗಾರಿಕೆ ಖಾದಿ ಗೃಹ ಕೈಗಾರಿಕೆಗಳ ಬಗ್ಗೆ ಬಹಳ ಹೆಚ್ಚಿನ ಆಸ್ಥೆ ಯನ್ನು ಕೊಟ್ಟಿವೆ ಮತ್ತು ಬಹಳ ಹೆಚ್ಚಿನ ಮಹತ್ವವನ್ನು ಕೂಡ ನಾವು ಕೊಟ್ಟಿದ್ದೇವೆ ಎಂಬುದನ್ನು ನಾನು ಜ್ಞಾಪಿಸಲು ಇಚ್ಛಿಸುತ್ತೇನೆ. ಯಾವ ಸಮುದ್ದೇಶಗಳಿಂದ ಈ ಖಾದಿ ಮಂಡಲಗಳನ್ನು ನಾವು ಸೃಷ್ಟಿ ಮಾಡಿದೆವೋ, ನಿರ್ಮಾಣ ಮಾಡಿದೆವೋ, ಆ ಸಮುದ್ದೇಶಗಳನ್ನು ಈಡೇರಿಸತಕ್ಕಂಥ ಮಾರ್ಗದಲ್ಲಿ ಹಲವಾರು ಅಡ್ಡಿಆತಂಕಗಳು ಬಂದಿವೆ ಅನ್ನತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ. ಮಾನ್ಯ ಸದಸ್ಯರಾದಂಥ ಶ್ರೀಮಾನ್ ಅಮ್ಮಿಗಂ ಅವರು ಒಂದು ಸಲಹೆ ಕೊಟ್ಟಿದ್ದಾರೆ. ಏನೆಂದರೆ, ಈ ಖಾದಿ ಮಂಡಲ ನಿರಿಯಾದಂಥ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲವಾದರಿಂದ, ಕೆಲಸ, ಕೆಲಸದ ಉದ್ದೇಶವನ್ನು ಸಾರ್ಥಕಪಡಿಸಿಕೊಂಡಿಲ್ಲವಾದ್ದರಿಂದ ಈ ಮಂಡಲಿಯನ್ನು ರದ್ದುಮಾಡಿ ಅದರ ಜವಾಬ್ದಾರಿಯನ್ನು ಇರಾಖೆಯೇ ನಿರ್ವಹಿಸಿಕೊಳ್ಳಬೇಕೆಂದು ಸಲಹೆ ಮಾಡಿದ್ದಾರೆ. ಈ ಬಗ್ಗೆ ನಾನು ಮಾನ್ಯ ಸದಸ್ಯರಲ್ಲಿ ವಿನಮ್ರನಾಗಿ ಸೂಚನೆ ಮಾಡುವುದೇನೆಂದರೆ, ಖಾದಿ ಕೈಗಾರಿಕೆಯನ್ನು ಒಂದು ಕಾಲದಲ್ಲಿ ಇಲಾಖೆಯೇ ನಡೆಸಿಕೊಂಡು ಬರುತ್ತಿತ್ತು. ಮುಂದೆ ಈ ಖಾದಿಗೆ ಕೊಟ್ಟಿನ ಮಹತ್ವ ಕೊಡಬೇಕೆಂಬ ದೃಷ್ಟಿಯಿಂದ ಅವನ್ನು ಒಂದು ಆಟಾನಮಸ್ ಕಾರ್ಪೊರೇಷನ್ ರೀತಿಯಲ್ಲಿ ನಾವು ಸೃಷ್ಟಿ ಮಾಡಿದ್ದೇವೆ. ಯಾವ ಒಂದು ಅಡ್ಡಿ ಆಡಚಣೆಯೂ ಇಲ್ಲದೆ, ಯಾವ ಇಂಟರ್‌ಫಿಯರೆನ್ಸ್ ಇಲ್ಲದೆ ಈ ಖಾದಿ ಮಂಡಲ ಸಮರ್ಪಕವಾದ ರೀತಿಯಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಕೆಲಸ ಮಾಡಬೇಕು ಅನ್ನತಕ್ಕಂಥ ಉದ್ದೇಶದಿಂದ ಈ ಖಾದಿ ಮಂಡಲಿಗೆ ಒಂದು ಸ್ಟೇಟಸ್ ಕೊಟ್ಟು, ಅದಕ್ಕೆ ಬೇಕಾದ ಹಣಕಾಸಿನ ವ್ಯವಸ್ಥೆ ಮಾಡಿ ಈ ಮಂಡಲಿಯನ್ನು ನಿರ್ಮಾಣ ಮಾಡಿದ್ದಾಗಿದೆ. ಈಗ ಮತ್ತೆ ಮಾನ್ಯ ಅಮ್ಮಿಗಂ ಅವರ ಸೂಚನೆಯನ್ನು ಒಪ್ಪಿ ಮುಂದುವರೆಯುವುದಾದರೆ, ನಾವು ಮತ್ತೆ ಹಿಂದಕ್ಕೆ ಹೋಗಬೇಕಾದೀತು ಎಂಬ ಶಂಕೆ ನನ್ನನ್ನು ಬಾಧಿಸುತ್ತಿದೆ. ಇಂದು ಈ ಖಾದಿ ಮಂಡಲಿ ನಡೆದುಕೊಂಡು ಹೋಗುತ್ತಿರುವ ಧಾಟಿ, ದಾರಿ, ಅಲ್ಲಿ ಆಗುತ್ತಿರುವ ವ್ಯವಹಾರಗಳ ಬಗ್ಗೆ ಬಹಳ ಜನ ಸ್ನೇಹಿತರುಗಳು ತಮ್ಮ ತೀಕ್ಷ್ಣವಾದ ಅಭಿಪ್ರಾಯಗಳನ್ನು ಸೂಚನೆ ಮಾಡಿದ್ದಾರೆ. ಮಾನ್ಯ ಕೋಣಂದೂರು ಲಿಂಗಪ್ಪನವರು, ಮಾನ್ಯ ವೀರಪ್ಪಗೌಡರು, ಶ್ರೀಮತಿ ದಮಯಂತಿ ಬೋರೇಗೌಡರು ಈ ಖಾದಿಯ ಬಗ್ಗೆ ವಿಶೇಷವಾದ ಅಧ್ಯಯನವನ್ನು ಮಾಡಿರತಕ್ಕಂಥ ಸದಸ್ಯರುಗಳಾಗಿದ್ದಾರೆ. ಶ್ರೀಮಾನ್ ಸಿದ್ದಪ್ಪನವರನ್ನು ಹಳೆಯ ಸ್ನೇಹಿತರು. ಮೊದಲು ನಾವಿಬ್ಬರೂ ಒಂದೇ ಪಕ್ಷದಲ್ಲಿ ಇದ್ದವರು. ಈಗ ಎಲ್ಲರು ಬದರು ಕುಳಿತಿದ್ದೇವೆ. ಅವರೂ ಸಹ ಇದರ ಬಗ್ಗೆ ತೀಕ್ಷ್ಣವಾಗಿ ಟೀಕೆ ಮಾಡಿ ಮಾತನಾಡುತ್ತಾ, ಈ ಖಾದಿ ಮಂಡಲ ರದ್ದಾಗಬೇಕೆಂದು ಸಲಹೆ ಕೊಟ್ಟಿದ್ದಾರೆ. ಇದಕ್ಕೆ ಕಾಯಕಲ್ಪವಾಗಬೇಕು, ಇದರ ಬಗ್ಗೆ ವಿಚಾರಣೆಯಾಗಬೇಕು ಎಂದು ಹೇಳಿದ್ದಾರೆ. ಅದನ್ನು ಲಘುವಾಗಿ ತಿರಸ್ಕಾರ ಮಾಡುವುದಿಲ್ಲ. ಆಯುವ್ಯಯ ಅಂದಾಜಿನ ಪುಟ್ಟಿಯ ಬಗ್ಗೆ ಮಾನ್ಯ ಸದಸ್ಯರು ಮಾತನಾಡುವ ಕಾಲಕ್ಕೆ ಕೂಡ ಈ ಖಾದಿ ಮಂಡಲಿಯ ಬಗ್ಗೆ ಬಹುತೇಕ ಟೀಕೆಗಳು ಮತ್ತು ಅಕ್ಷೇಪಣೆಗಳು ಬಂದಿವೆ. ಅದನ್ನು ಸಹ ನಾನು ಗಮನಿಸಿದ್ದೇನೆ. ಶ್ರೀಮಾನ್ ವೀರಪ್ಪಗೌಡರೇ ಸದಸ್ಯರಾಗಿದ್ದಂಥ ಒಂದು ಎನ್‌ಕ್ವೈರಿ ಮಂಡಲಿಯ ವರದಿಯ ಬಗ್ಗೆ ಅವರು ನನ್ನ ಗಮನವನ್ನು ಸೆಳೆದಿದ್ದಾರೆ. ಅವರು ಆ ವಿಚಾರಗಳನ್ನೆಲ್ಲಾ ಹೇಳಿದ ಮೇಲೆ ಆ ಎನ್‌ಕ್ವೈರಿ ಮಂಡಲಿಯ ವಿದ್ಯಮಾನಗಳನ್ನು ಪರಿಶೀಲಿಸುತ್ತಿದ್ದೇನೆ. 1962-63ನೇ ಇಸವಿಯ ವರೆಗೆ ಬಂದಿರತಕ್ಕಂಥ ಟೀಕೆಗಳ ಬಗ್ಗೆ, ಮಾನ್ಯ ಸದಸ್ಯರು ಹೇಳಿದಂಥ ನಾಲ್ಕು ಜನ ಸದಸ್ಯರುಗಳು ವಿಚಾರಣೆ ನಡೆಸಿದ್ದಾರೆ. ಟೀಕೆಗಳಲ್ಲಿ ಬಂದಿರತಕ್ಕಂಥ ಅಧಿಕಾರಿಗಳ ಬಗ್ಗೆ, ಸಂಸ್ಥೆಗಳ ಬಗ್ಗೆ, ಸಂಘಗಳ ಬಗ್ಗೆ ಅವರು ವಿಚಾರಣೆ ನಡೆಸಿದ್ದಾರೆ. ಆ ವಿಚಾರಣೆಗಳ ವರದಿಯನ್ನು ನಾನು ಓದುತ್ತಿದ್ದೇನೆ. ಒಟ್ಟಿನಲ್ಲಿ ಖಾದಿ ಮಂಡಲಿಯಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕು ಎಂಬುದು ಈ ಸದನದ ಒಟ್ಟಾರೆ ಅಭಿಪ್ರಾಯವಾಗಿದೆ ಎಂಬುದನ್ನು ಸರ್ಕಾರದವರು ಗಮನಿಸಿದ್ದಾರೆ. ಇಲ್ಲಿರತಕ್ಕಂಥ ಹಲವಾರು ಲೋಪದೋಷಗಳನ್ನು, ಕೊರತೆಗಳನ್ನು, ಇಲ್ಲಿ ಉದ್ಭವವಾಗಿರಬಹುದಾದಂಥ, ನಡೆದಿರಬಹುದಾದಂಥ ಹಲವಾರು ವ್ಯವಹಾರಗಳನ್ನು ಈ ಸದನದ ಎಲ್ಲ ಪಕ್ಷದ ಸದಸ್ಯರುಗಳು ಕೂಡ ಕೇಳಿರುವುದನ್ನು ನೋಡಿದರೆ, ಈ ಮಂಡಲಿಯ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿಲ್ಲ ಎಂಬುದು ಗೊತ್ತಾಗುತ್ತದೆ. ಇಂತಹ ಟೀಕೆಗಳು ಬಂದಾಗ, ಆ ಟೀಕೆಗಳಲ್ಲಿ ಸಾಕಾದಷ್ಟು ಸತ್ವವಿರುವಾಗ ಸರ್ಕಾರದವರಾದರೂ ಸಹ ಆ ಟೀಕೆಗಳನ್ನು ತಿರಸ್ಕಾರ ಮಾಡುವುದು ಪ್ರಜಾಪ್ರಭುತ್ವದ ತತ್ವಕ್ಕೆ ವಿರುದ್ಧವಾದಂಥ ನಿಲುವಾಗುತ್ತದೆ. ಆ ಒಂದು ನಿಲುವನ್ನು

ತೆಗೆದುಕೊಳ್ಳಲು ಇಷ್ಟಪಡದೆ, ಈ ಸಭೆಯ ಆಗ್ರಹಪೂರ್ವಕವಾದ ಸಲಹೆಗೆ ಮಣಿದು ಖಾದಿ ಮಂಡಲಿಯ ಬಗ್ಗೆ ಸರ್ಕಾರದವರು ವಿಚಾರಣೆಯನ್ನು ಏರ್ಪಾಡು ಮಾಡುತ್ತಾರೆನ್ನುವ ಆಶ್ವಾಸನೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಈಗಿನ ಮಂಡಲಿಯನ್ನು ರದ್ದುಮಾಡಿ ವಿಚಾರಣೆ ಮಾಡುತ್ತೀರೋ ಅಥವಾ ಈಗಿರುವ ಹಾಗೆ ವಿಚಾರಣೆಮಾಡುತ್ತಿರೋ?

ಶ್ರೀ ಎಸ್. ಎಂ. ಕೃಷ್ಣ.—ಆ ವಿಚಾರವನ್ನು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಈಗಿರುವ ಹಾಗೆ ವಿಚಾರಣೆ ಮಾಡಿದರೆ, ಲೆಕ್ಕಗಳನ್ನು ತಿದ್ದುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಹೇಳಿದಂಥ ವಿಚಾರವನ್ನು ನಾನು ಪರಿಶೀಲನೆ ಮಾಡುತ್ತೇನೆ. ವಿಚಾರಣೆ ಮಾಡುವುದಕ್ಕೆ ಸರ್ಕಾರದವರು ಈಗ ಸಿದ್ಧರಾಗಿದ್ದಾರೆ. ಆ ವಿಚಾರಣೆಯನ್ನು ಆತಿ ಶೀಘ್ರದಲ್ಲಿಯೇ ಏರ್ಪಾಡು ಮಾಡುತ್ತೇವೆ. ಈ ಒಂದು ಮಾತಿನಿಂದ ಮಾನ್ಯ ಸದಸ್ಯರಿಗೆ ಕೊಂಚಮಟ್ಟಿಗೆ ಸಮಾಧಾನ ತಂದುಕೊಡಬಹುದು ಎಂದು ಭಾವಿಸುತ್ತೇನೆ. 1957–58 ರಿಂದ 1971–72ನೇ ಇಸವಿಯವರೆಗೆ 761 ಲಕ್ಷ ರೂಪಾಯಿಗಳನ್ನು ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯವರು ಡಿಸ್‌ಬರ್ಸ್ ಮಾಡಿದ್ದಾರೆ. ಅದರಲ್ಲಿ ಹಿಂದಕ್ಕೆ ಪಡೆದಿರುವ ಮೊಬಲಗು 472 ಲಕ್ಷ ರೂಪಾಯಿಗಳು. ಅಂದರೆ ಶೇಕಡ 60 ರಷ್ಟು ಹಣವನ್ನು ವಾಪಸ್ ಪಡೆದಿದ್ದಾರೆ.

11-30 A, M.

ಜೊತೆಗೆ ನಾವು ಕೊಡುತ್ತಿರುವ ಸಬ್‌ಸಿಡಿ, ಇದುವರೆಗೆ ಸುಮಾರು 27 ಲಕ್ಷ ರೂಪಾಯಿಗಳಷ್ಟು ಸಬ್‌ಸಿಡಿಯಾಗಿ ಕೊಟ್ಟಿದ್ದೇವೆ. ಜೊತೆಗೆ ಸುಮಾರು 5.30 ಲಕ್ಷ ರೂಪಾಯಿಗಳ ಮೊತ್ತದ ಖಾದಿಯನ್ನು 1957 ರಿಂದ 1971-72 ರ ವರೆಗೆ ಉತ್ಪಾದನೆ ಮಾಡಿದ್ದೇವೆ. ನನ್ನೆ ದಿವಸ ಈ ಸದನದ ಸನ್ಮಾನ್ಯ ಸದಸ್ಯರಾದ ಶ್ರೀ ಪ್ರಭಾಕರ್‌ರವರು ತೀವ್ರವಾದ ರೀತಿಯಲ್ಲಿ ಈ ಮಂಡಲಿಯನ್ನು ಸುಧಾರಣೆ ಮಾಡುವುದರ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಅವರು ಮಾಡಿದ ಭಾಷಣವನ್ನ ಮೇಲೆ ಬಹಳ ಒಳ್ಳೆಯ ಅಭಿಪ್ರಾಯವನ್ನು ಮೂಡಿಸುವಂತದಾಯಿತು. ಖಾದಿಯ ಬಗ್ಗೆ ಈ ದೇಶದಲ್ಲಿರತಕ್ಕ ಕಳಕಳೆ ಏನಿವೆ ಮತ್ತು ಯಾವ ಉದ್ದೇಶದಿಂದ ಖಾದಿ ಮಂಡಲಿ ನಿರ್ಮಾಣವಾಯಿತು ಆ ಉದ್ದೇಶಗಳಿಗೆ ಭಂಗ ಬಾರದ ರೀತಿಯಲ್ಲಿ ಈ ಮಂಡಲಿಯ ವ್ಯವಹಾರಗಳಿಗೆ ಆನುವು ಮಾಡಿಕೊಡಬೇಕೆಂದು ಮಾನ್ಯ ಸದಸ್ಯರಾದ ಶ್ರೀಮಾನ್ ಪ್ರಭಾಕರ್ ರವರು ಹೇಳಿದ್ದಾರೆ. ಅವರು ಹೇಳಿರುವ ಮಾತುಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಇಲ್ಲಿ ತಂದಿರುವ ತಿದ್ದುಪಡಿ ಮಸೂದೆ ಈ ಖಾದಿ ಮಂಡಲಿ ಇನ್ನೂ ಹೆಚ್ಚು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕೆಂದು ಕೆಲವು ಸುಧಾರಣೆಗಳನ್ನು ಮಾಡಿ ಇಲ್ಲಿ ತಂದಿದ್ದೇವೆ. ಮೊಟ್ಟ ಮೊದಲನೆಯ ಸುಧಾರಣೆ ಎಂದರೆ ಖಾದಿ ಮಂಡಲಿಯ ಲೆಕ್ಕ ಪತ್ರಗಳನ್ನು ಇಡತಕ್ಕ ಬಗ್ಗೆ ನಮ್ಮ ಪಬ್ಲಿಕ್ ಸೆಕ್ಟಾರ್ ಇನ್‌ಸ್ಟಿಟ್ಯೂಷನ್‌ಗಳು ಹಾಗೂ ಇತರ ಫೈನಾನ್ಸ್ ಕಾರ್ಪೊರೇಷನ್‌ಗಳಲ್ಲಿ ಮುಖ್ಯವಾದುದು ಫೈನಾನ್ಷಿಯಲ್ ಡಿಸಿಪ್ಲಿನ್ ಒಂದು ಕಡೆ ಇರಬೇಕು. ಮತ್ತು ಅಕೌಂಟ್ಸ್‌ಗಳ ಡಿಸಿಪ್ಲಿನ್ ಒಂದು ಕಡೆ ಇರಬೇಕು. ಕೆಲವು ಸೊಸೈಟಿಗಳಲ್ಲಿ ಲೆಕ್ಕಪತ್ರಗಳು ಸಿಗದೇ ನಿರತಕ್ಕದ್ದು ಅಥವಾ ಸರಿಯಾಗಿ ಕೆಲವು ಸಂಘ ಸಂಸ್ಥೆಗಳಲ್ಲಿ ಕಾನೂನಿನಂತೆ ಯಾವ ವಿಧವಾದ ಲೆಕ್ಕಪತ್ರಗಳೂ ಇಲ್ಲದೇ ಇರುವುದು ಇವು ಅಕೌಂಟ್ಸ್ ಇಂಡಿಸಿಪ್ಲಿನ್ ಆಗುತ್ತದೆ, ಇವಕ್ಕಾಗಿ ಇದರಲ್ಲಿ ಒಂದು ತಿದ್ದುಪಡಿ ಮಾಡಿ ಕೇಂದ್ರ ಸರ್ಕಾರದಿಂದ ಒಬ್ಬ ಫೈನಾನ್ಷಿಯಲ್ ಅಡ್ವೈಸರ್ ಹಾಗೂ ಚೀಫ್ ಅಕೌಂಟ್ಸ್ ಆಫೀಸರ್ ಎನ್ನುವ ಒಬ್ಬರು ಅಧಿಕಾರಿಗಳನ್ನು ಇಲ್ಲಿ ನೇಮಕ ಮಾಡಬೇಕೆಂದು ಈ ತಿದ್ದುಪಡಿ ಮಸೂದೆಯಲ್ಲಿ ಸೂಚನೆ ಮಾಡಿ ತರಲಾಗಿದೆ. ಇನ್ನೊಂದು ಸುಧಾರಣೆ ಈ ಸಲಹಾ ಮಂಡಲಿಯು ಇದುವರೆಗೆ ಮಾಡಿರತಕ್ಕ ಎಲ್ಲ ರೂಲ್ಸುಗಳನ್ನೂ ಈ ಸದನದ ಮುಂದೆ ಇಡಬೇಕು ಎನ್ನುವುದು. ಇದನ್ನು ತಾವೆಲ್ಲರೂ ಸ್ವಾಗತಿಸುತ್ತೀರಿ ಎಂದು ಭಾವನೆ ಮಾಡುತ್ತೇನೆ. ಇದೊಂದು ಸ್ವಾಗತಾರ್ಹವಾದ ಸುಧಾರಣೆ ಎಂದು ಇದರಲ್ಲಿ ಮಾಡಿದ್ದೇವೆ.

ಇನ್ನೊಂದು ಮುಖ್ಯವಾದ ಸುಧಾರಣೆ ಎಂದರೆ ಇಂತಹ ಸಂಘ ಸಂಸ್ಥೆಗಳಿಗೆ ಸಾಲವಾಗಿ ಕೊಟ್ಟಿರುವ ಹಣವನ್ನು ವಸೂಲು ಮಾಡುವಾಗ ನಮ್ಮ ಈ ಖಾದಿ ಮಂಡಲಿಯಲ್ಲಿ ಬಹಳ ತೊಂದರೆಗಳಾಗುತ್ತಿವೆ. ನಮ್ಮ ಅನುಭವದಲ್ಲಿ ಕಂಡುಬಂದಿರುವಂತೆ ಬಾಕಿ ಯಾವುದಾದರೂ ಕೋ-ಆಪ

(ಶ್ರೀ ಎಸ್. ಎಂ. ಕೃಷ್ಣ)

ರೇಟೀವ್ ಎಂದರೆ ಸರ್ವಿಸ್ ಕೋಆಪರೇಟಿವ್ ಸಂಘಗಳಿಗೆ ಸಾಲದ ಹಣವನ್ನು ವಸೂಲು ಮಾಡುವಾಗ ಕಂದಾಯದ ಭಾಕಿಯಂತೆ ಹಣ ವಸೂಲು ಮಾಡಲು ಅವಕಾಶವಿದೆ. ಆದರೆ ಇದರಲ್ಲಿ ಅವಕಾಶವಿರಲಿಲ್ಲ. ಇನ್ನು ಮುಂದೆ ಖಾದಿ ಬೋರ್ಡಿನಲ್ಲೂ ಸಾಲವನ್ನು ರಿಕವರಿ ಮಾಡುವಾಗ ಲ್ಯಾಂಡ್ ರೆವಿನ್ಯೂ ಬಾಕಿ ಯಾವ ರೀತಿ ವಸೂಲು ಮಾಡುತ್ತಾರೋ ಅವೇ ರೀತಿ ಇಲ್ಲೂ ವಸೂಲಿ ಮಾಡುವಾಗ ಲ್ಯಾಂಡ್ ರೆವಿನ್ಯೂ ಅಧಿಕಾರಿಗಳು ವಸೂಲು ಮಾಡುವಂತೆ ಒಂದು ಹೊಸ ಕ್ಲಾಸನ್ನು ಇದರಲ್ಲಿ ಅಳವಡಿಸಲಾಗಿದೆ. ಅದು ಕ್ಲಾಸು 3 ರಲ್ಲಿ ಇದೆ. ಇದಕ್ಕೆ ತಾವೆಲ್ಲರೂ ಸ್ವಾಗತ ಮಾಡುತ್ತೀರಿ ಎಂದು ಭಾವಿಸುತ್ತೇನೆ.

ಇನ್ನು ಶ್ರೀಮಾನ್ ವೀರಪ್ಪಗೌಡರು ಹೊಸದುರ್ಗದ ಯಾವುದೋ ಸೊಸೈಟಿಯ ಬಗ್ಗೆ ಹೇಳುತ್ತಾ, ಆದರಲ್ಲಿ ಸುಮಾರು ಅರವತ್ತು ಲಕ್ಷ ಹಣ ದುರುಪಯೋಗವಾಯಿತು ಎಂದು ಹೇಳಿದರು ಮತ್ತು ಅವರ ಭಾವನೆಯಂತೆ ಕೆಲವು ಕಡೆಗಳಲ್ಲಿ ಸುಮಾರು 60-70 ಲಕ್ಷ ರೂಪಾಯಿಗಳಷ್ಟು ಮಿಸ್‌ಅಪ್ರೋಪ್ರಿಯೇಷನ್ ಆಗಿವೆ ಎಂದು ತಿಳಿಯಿತು. ಮಾನ್ಯ ಸದಸ್ಯರಾದ ಶ್ರೀಮತಿ ದಮಯಂತಿ ಬೋರೇಗೌಡರು ಮಾತನಾಡುತ್ತಾ ಕೆಲವು ಕಡೆಗಳಲ್ಲಿ ಮಿಸ್‌ಅಪ್ರೋಪ್ರಿಯೇಷನ್ ಘಟನೆಗಳೇ ನಾಪತ್ತೆಯಾಗಿವೆ ಎಂದು ಹೇಳಿದರು. ಇವುಗಳನ್ನೆಲ್ಲಾ ಸರಿಯಾಗಿ ಇನ್ನು ಮುಂದೆ ವಿಚಾರ ಮಾಡುವುದರ ಸಲುವಾಗಿ ಈ ಮಂತ್ರಿಗಳಿಗೆ ಒಬ್ಬರು ಕೇಂದ್ರ ಸರಕಾರದ ಫೈನಾನ್ಷಿಯಲ್ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದು ಮತ್ತು ಇದರಲ್ಲಿ ಹೆಚ್ಚು ಜವಾಬ್ದಾರಿ ಇರಬೇಕೆಂದು ಮಾಡಲಾಗಿದೆ. ಇನ್ನು ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸಲುನಾಯ್ಡು ರವರು ಇಲ್ಲಿ ಎನ್‌ಕ್ವೈರಿ ಮಾಡುವಾಗ ಸ್ವಲ್ಪ ಎಫೆಕ್ಟೀವ್ ಆಗಿ ಮಾಡಬೇಕೆಂದು ಪ್ರಸ್ತಾಪ ಮಾಡಿದರು. ಇದರ ಬಗ್ಗೆ ಈಗಾಗಲೇ ಉತ್ತರ ಹೇಳಿದ್ದೇನೆ. ಶ್ರೀ ಪ್ರಭಾಕರ್ ರವರು ಖಾದಿ ಬಗ್ಗೆ ಹೇಳುತ್ತಾ ಮೈಸೂರು ಖಾದಿಗೆ ಹೆಚ್ಚು ಪ್ರೋತ್ಸಾಹ ಸಿಗುತ್ತಿಲ್ಲ ಎಂದರು, ಬಿಹಾರ್ ಖಾದಿ ಹಾಗೂ ಆಂಧ್ರ ಖಾದಿಗೇ ಹೆಸರು ಹೆಚ್ಚಾಗಿದೆ ಆದರೆ ಮೈಸೂರು ಖಾದಿಯ ಹೆಸರೇ ಎಲ್ಲೂ ಕೇಳುವುದೇ ಇಲ್ಲ ಎಂದು ಹೇಳಿದರು. ಒಂದು ಕಾಲದಲ್ಲಿ ನನಗೆ ತಿಳಿದಂತೆ ಐಮಂಗಲದ ಖಾದಿ ಎಂದಿತ್ತು. ತದನಂತರ ಬದನವಾಳ ಖಾದಿ ಎಂದು ಬಂತು. ಈಗ ಐಮಂಗಲದ ಖಾದಿ ಎನ್ನುವುದು ಇಲ್ಲವೇ ಇಲ್ಲ, ಬದನವಾಳ ಖಾದಿ ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವುದು ನನಗೆ ಗೊತ್ತಿಲ್ಲ. ಆದರೆ ಮೈಸೂರು ಖಾದಿಗೆ ಸಾಕಷ್ಟು ಪ್ರೋತ್ಸಾಹ ದೊರಕುತ್ತಿಲ್ಲ ಎನ್ನುವ ವಾದವನ್ನು ನಾನು ಒಪ್ಪುವುದಿಲ್ಲ. ಮೈಸೂರು ಖಾದಿ ಒಳ್ಳೆಯ ಹೆಸರನ್ನು ಮಾಡಿದೆ. ಆದರೆ ಖಾದಿ ಎನ್ನುವ ಹೆಸರಿನಲ್ಲಿ ಸಾಕಾದಷ್ಟು ತಿರುಳು ಸತ್ಯ ಇದೆ ಎನ್ನುವುದನ್ನು ನಾನೂ ಒಪ್ಪುತ್ತೇನೆ. ಖಾದಿ ಬಗ್ಗೆ ಇನ್ನೂ ಹೆಚ್ಚು ರೀಸರ್ಚ್ ನಡೆಯಬೇಕು ಮತ್ತು ಇನ್ನೂ ಹೆಚ್ಚು ಮಾದರಿಯನ್ನು ಮಾಡಬೇಕಾಗಿದೆ. ಈಗ ಶಾಲಾ ಕಾಲೇಜುಗಳಲ್ಲಿ ಖಾದಿಯ ಬಿಟ್ಟಿಯನ್ನು ಅಲ್ಲಿನ ವಿದ್ಯಾರ್ಥಿಗಳು ಉಪಯೋಗ ಮಾಡಲು ಪ್ರಾರಂಭಮಾಡಿವ್ವಾರೆ. ಆದುದರಿಂದ ಇನ್ನು ಮುಂದೆ ಈ ಖಾದಿಗೆ ಹೆಚ್ಚು ಪ್ರೋತ್ಸಾಹ ಕೊಡ ಬೇಕಾದುದು ಅವಶ್ಯವಾಗಿದೆ. ಇದಕ್ಕಾಗಿ ಸರ್ಕಾರ ಬೇಕಾದಷ್ಟು ಹಣಕಾಸಿನ ನವಲತ್ತುಗಳನ್ನು ಒದಗಿಸಿಕೊಡುತ್ತಿದೆ. ಈ ಸಭೆಯ ಅವಗಾಹನೆಗಾಗಿ ತಂದಿರುವ ತಿದ್ದುಪಡಿ ಮಸೂದೆಗೆ ತಾವೆಲ್ಲರೂ ಸ್ವಾಗತಮಾಡಿ ಇದಕ್ಕೆ ಬೆಂಬಲವನ್ನು ಕೊಡಬೇಕೆಂದು ಮತ್ತು ಇದನ್ನು ಒಪ್ಪಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಪ್ರಭಾಕರ್.—ಈ ಖಾದಿ ಬೋರ್ಡನ್ನು ಅಬಾಲಿಷ್ ಮಾಡುವುದಕ್ಕೆ ಮೊದಲು ಈ ಮುಂದಿಯಲ್ಲರುವ ಅಸೆಟ್ಸ್‌ನ ಹಾಗೂ ಲಯಬಿಲಿಟಿಸ್‌ಗಳನ್ನು ಸರಕಾರ ತೆಗೆದುಕೊಂಡು ಅಮೇಲೆ ಇದನ್ನು ಅಬಾಲಿಷ್ ಮಾಡಬೇಕು.

Mr. DEPUTY SPEAKER.—The question is :

"That the Mysore Khadi and Village Industries (Amendment) Bill, 1972 be taken into consideration."

The motion was adopted.

CLAUSE 2

Mr. DEPUTY SPEAKER.—The question is

"That Clause 2 do stand part of the Bill."

The motion was adopted.

Clause 2 was added to the Bill.

CLAUSE 3

Mr. DEPUTY SPEAKER.—The question is:

"That Clause 3 do stand part of the Bill."

Sri S. M. KRISHNA (Minister for Industries).—I beg to move an amendment to Clause 3:

"That in sub-section (3) of Section 22-A proposed to be inserted by this clause for the words "one person who is not connected with the Board or the person by whom the sum is alleged to be payable", the words "a Judicial Officer not below the rank of a District Judge" shall be substituted."

Mr. DEPUTY SPEAKER.—Amendment moved:

"That in sub-section (3) of Section 22-A proposed to be inserted by this clause for the words "one person who is not connected with the Board or the person by whom the sum is alleged to be payable", the words "a Judicial Officer not below the rank of a District Judge" shall be substituted."

Sri V. N. PATIL.—I beg to move an amendment to Clause 3:

"That at page 3, in sub-clause (3) for the words "n t connected with the Board or the person by whom the sum is allaged to payable," the words "not below the rank of a District Judge" shall be substituted."

Mr. DEPUTY SPEAKER.—Amendment moved:

"That at page 3, in sub-clause (3) for the words "not connecte l with the Board or the person by whom the sum is allaged to be payable", the words "not below the rank of a District Judge" shall be substituted."

† ಶ್ರೀ ಎನ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ತಂದಿರುವ ತಿದ್ದುಪಡಿ ಸ್ಪಷ್ಟವಾಗಿರಬೇಕೆಂದು ತರಲಾಗಿದೆ. ಇದಕ್ಕೂ ಈಗ ಮಾನ್ಯ ಸದಸ್ಯರಾದ ಶ್ರೀ ಪಾಟೀಲ್‌ರವರು ಹಾಗೂ ಶ್ರೀ ಕೃಷ್ಣನ್ ರವರು ತಂದಿರುವ ರದ್ದುಪಡಿಗೂ ತಾತ್ವಿಕವಾಗಿ ಏನೂ ವೈತ್ಯಾಸ ಕಾಣುತ್ತಿಲ್ಲ. ಇದರ ಬಗ್ಗೆ ಜಿಜ್ಞಾಸೆ ಮಾಡುವಂತಹ ವಿಚಾರಗಳಾವುವೂ ಇಲ್ಲ. ಆದುದರಿಂದ ಮಾನ್ಯ ಸದಸ್ಯರು ಅವರ ತಿದ್ದುಪಡಿಯನ್ನು ವಾಪಸು ತೆಗೆದುಕೊಂಡು ನಾನು ಇಲ್ಲಿ ತಂದಿರುವ ತಿದ್ದುಪಡಿಗೆ ಅನುಮೋದನೆ ಕೊಡುತ್ತಾರೆಂದು ಆಶಿಸುತ್ತೇನೆ ಮತ್ತು ಅವರ ತಿದ್ದುಪಡಿ ವಾಪಸು ತೆಗೆದುಕೊಳ್ಳಬೇಕೆಂದು ಅವರನ್ನು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಉಪಾಧ್ಯಕ್ಷರೇ, ತಾತ್ವಿಕ ದೃಷ್ಟಿಯಿಂದ ನಾನು ತಂದಿರುವ ತಿದ್ದುಪಡಿಗೂ, ಮಾನ್ಯ ಸಚಿವರು ತಂದಿರುವ ತಿದ್ದುಪಡಿಗೂ ಯಾವ ವ್ಯತ್ಯಾಸವೂ ಇಲ್ಲ. ಈ ತಿದ್ದುಪಡಿಯನ್ನು ತರುವುದಕ್ಕೆ ಮುಖ್ಯ ಕಾರಣವೇನು ಎನ್ನುವುದನ್ನು ನಾನು ಹೇಳಬೇಕಾಗಿದೆ. ನಾನು ಮತ್ತು ಮಾನ್ಯ ಸ್ತ್ರೀಹಿತರಾದ ಎಂ. ಎಸ್. ಕೃಷ್ಣನ್ ಅವರು ಮಾನ್ಯರಾ ಮುಂತ್ರಿಗಳನ್ನು ಮತ್ತು ಕೈಗಾರಿಕಾ ಮುಂತ್ರಿಗಳನ್ನು ಕಂಡು ಇಂಥ ತಿದ್ದುಪಡಿಯನ್ನು ತರುವುದು ಅವಶ್ಯವಿದೆ ಎಂದು ಹೇಳಿದೆವು. ಅವರು ತಿದ್ದುಪಡಿಯನ್ನು ತರುತ್ತಾರೆಯೋ ಇಲ್ಲವೋ ಎನ್ನುವ ಭಯವಿದ್ದುದರಿಂದ ನಾವು ಕೂಡ ತಿದ್ದುಪಡಿಯನ್ನು ಕಳುಹಿಸಬೇಕಾಯಿತು. ಈ ಎರಡೂ ತಿದ್ದುಪಡಿಗಳಲ್ಲಿ ತಾತ್ವಿಕವಾಗಿ ಏನೂ ವ್ಯತ್ಯಾಸವಿಲ್ಲ. ಆದ್ದರಿಂದ ನಾನು ನನ್ನ ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳುತ್ತೇನೆ.

I will withdraw my amendment and I support the official amendment brought forward by the Hon'ble Minister for Industries.

Mr. DEPUTY SPEAKER.—The question is:

"In sub-section (3) of Section 22-A proposed to be inserted by this clause for the words "one person who is not connected with the Board or the person by whom the sum is alleged to be payable", the words "a Judicial Officer not below the rank of a District Judge" shall be substituted."

The amendment was adopted.

Mr. DEPUTY SPEAKER.—What does the Hon'ble Member propose to do with the amendment?

Sri V. N. PATIL.—I beg leave of the House to withdraw the amendment.

The amendment was, by leave, withdrawn.

Mr. DEPUTY SPEAKER.—The question is:

"That Clause 3, as amended, do stand part of the Bill".

The motion was adopted.

Clause 3, as amended, was added to the Bill.

CLAUSES 4 AND 5

Mr. DEPUTY SPEAKER.—The question is:

"That Clauses 4 and 5 do stand part of the Bill".

The motion was adopted.

Clauses 4 and 5 were added to the Bill.

CLAUSE 1, ETC.

Mr. DEPUTY SPEAKER.—The question is :

" That Clause 1, Long Title, the Preamble and the Enacting Formula do stand part of the Bill."

The motion was adopted.

Clause 1, the Long Title, the Preamble and the Enacting Formula were added to the Bill.

Motion to pass.

Sri S. M. KRISHNA.—I beg to move :

" That the Mysore Khadi and Village Industries (Amendment) Bill, 1972, as amended, be passed."

Mr. DEPUTY SPEAKER.—The question is :

" That the Mysore Khadi and Village Industries (Amendment) Bill, 1972, as amended, be passed."

The motion was adopted and the Bill as amended was passed.

STUDY TEAM TO TOUR SCARCITY AFFECTED AREAS OF THE STATE—NAMES OF MEMBERS ANNOUNCED BY CHIEF MINISTER.

Sri D. DEVARAJ URS (Chief Minister).—Before you proceed to the next item on the agenda, I seek your permission to announce the names of the Study Team which is proposed to be sent. The names are as follows :—

Sriyuths—

1. M. Mallappa,
2. B. Subbiah Setty,
3. A. M. Suryanarayana Gowda,
4. Sri Subhas Asture,
5. G. Puttaswamy,
6. K. Prabhakar,
7. Nazir Ahmed Siddiqui,
8. G. Rame Gowda,
9. M. N. Kheny,

(SRI D. DEVARAJ URS)

Sriyuths—

10. Ramakrishna Hegde,
11. G. S. Ullal,
12. V. N. Patil,
13. Vishwanath Reddy,
14. Konandur Lingappa,
15. Sri S. Bangarappa,
16. Sri C. Byregowda,
17. S. Y. Patil,
18. L. T. Karle,
19. C. M. Arumugam, and
20. A. M. Belliappa.

OFFICIAL RESOLUTION *RE*: THE MYSORE STATE (ALTERATION OF NAME) BILL, 1972.

Sri D. K. NAIKAR (Minister for Law and Parliamentary Affairs).—I beg to move the following resolution:—

"Whereas the President of India, has, in pursuance of the proviso to the article 3 of the Constitution of India, referred to this House the Mysore State (Alteration of Name) Bill, 1972 for expressing its views thereon:

Now, therefore, this House delclares its considered opinion that the proposals contained in the said Bill be approved;

And this House further requests that the said Bill be introduced in the Parliament and passed into law as expeditiously as possible."

Mr. DEPUTY SPEAKER—Motion moved:

"Whereas the President of India, has, in pursuance of the proviso to the article 3 of the Constitution of India, referred to this House the Mysore State (Alteration of Name) Bill, 1972 for expressing its views thereon;

Now, therefore, this House declares its considerel opinion that the proposals contained in the said Bill be approved;

And this House further requests that the said Bill be introduced in the Parliament and passed into law as expeditiously as possible."

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ, ಈ ಮೊದಲು ನಮ್ಮ ರಾಜ್ಯದ ಹೆಸರು 'ಮೈಸೂರು' ಎಂದು ಇದ್ದುದನ್ನು 'ಕರ್ನಾಟಕ' ಎಂಬುದಾಗಿ ಬದಲಾಯಿಸಬೇಕು ಎನ್ನುವುದರ ಬಗ್ಗೆ ಎರಡೂ ಸದನಗಳಲ್ಲಿ ನರ್ವಾನುಮತದಿಂದ ಠರಾವು ಮಾಡಿ, ಕೇಂದ್ರ ಸರ್ಕಾರದವರು. ಅವಶ್ಯಕವಾದ ತಿದ್ದುಪಡಿಯನ್ನು ಪಾರ್ಲಮೆಂಟಿನ ಎರಡೂ ಸದನಗಳಲ್ಲಿ ತರಬೇಕೆಂದು ಕೇಳಿ ಕೊಳ್ಳಲಾಯಿತು. ಸಂವಿಧಾನದ ಆರ್ಟಿಕಲ್ 3ರಲ್ಲಿ ಏನಿದೆ ಎಂದರೆ ಕೇಂದ್ರ ಸರ್ಕಾರದವರು ಇದರ ಬಗ್ಗೆ ಬಿಲ್ ತಯಾರು ಮಾಡಿದ ನಂತರ ಆ ಬಿಲ್ಲನ್ನು ರಾಷ್ಟ್ರಾಧ್ಯಕ್ಷರು ನಿರ್ದಿಷ್ಟಪಡಿಸಿದ ಅವಧಿಯಲ್ಲಿ ಈ ರಾಜ್ಯದ ಎರಡೂ ಸದನಗಳನ್ನು ಕೇಳಿ ಅದರ ಒಪ್ಪಿಗೆಯನ್ನು ಪಡೆಯಬೇಕು ಎಂದು ಇದೆ. ಆ ಪ್ರಕಾರವಾಗಿ ಕೇಂದ್ರ ಸರ್ಕಾರದವರು ಈ ಬಿಲ್ಲನ್ನು ತಯಾರು ಮಾಡಿ ಅದಕ್ಕೆ ಮೈಸೂರು ಸ್ಟೇಟ್ (ಆಲ್ಟರೇಷನ್ ಆಫ್ ನೇಮ್) ಬಿಲ್, 1972' ತಯಾರು ಮಾಡಿ ಅದನ್ನು ನಮ್ಮ ರಾಜ್ಯದ ಎರಡೂ ಸದನಗಳ ಅಭಿಪ್ರಾಯವನ್ನು ಸ್ವೀಕಾರ ಮಾಡುವುದಕ್ಕೋಸ್ಕರ ಕಳುಹಿಸಿ ಕೊಟ್ಟಿದ್ದಾರೆ ಮತ್ತು ಇದನ್ನು ಮೂರು ತಿಂಗಳ ಒಳಗಾಗಿ ನಾವು ನಮ್ಮ ಅಭಿಪ್ರಾಯವನ್ನು ನೀಡಬೇಕು ಎಂದು ತಿಳಿಸಿದ್ದಾರೆ. ಅದರ ಪ್ರಕಾರ ಮಾನ್ಯ ಸದಸ್ಯರು ಈ ರಾಜ್ಯಕ್ಕೆ 'ಕರ್ನಾಟಕ' ಎನ್ನುವ ಹೆಸರನ್ನು ಇಡುವುದಕ್ಕೆ ಹಿಂದೆ ಒಪ್ಪಿಗೆಯನ್ನು ಕೊಟ್ಟಿದ್ದಾರೆಯೋ ಅದೇ ಪ್ರಕಾರ ಈ ಹೊತ್ತಿನ ದಿವಸವೂ ಕೊಡಬೇಕು ಎಂದು ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

Mr. DEPUTY SPEAKER.—I will put the resolution to the vote of the House. The question is :

> "Whereas the President of India, has, in pursuance of the proviso to the article 3 of the Constitution of India, referred to this House the Mysore State (Alteration of Name) Bill, 1972 for expressing its viewsthereon ;
>
> Now, therefore, this House declares its considered opinion that the proposals contained in the said Bill be approved ;
>
> And this House further requests that the said Bill be introduced in the Parliament and passed into law as expeditiously as possible."

The motion was adopted and the resolution was unanimously passed.

Mr. DEPUTY SPEAKER.—The House will now stand adjourned to meet again on Monday the 4th December 1972 at 1 P.M.

The House adjourned at fifty minutes past Eleven of the Clock to meet again at One of the Clock on Monday, the 4th December 1972.

ANNEXURE

ENGLISH TRANSLATION OF THE SPEECH OF THE MINISTER FOR LAW AND PARLIAMENTARY AFFAIRS.

Sri D. K. NAIKAR.—Hon'ble Speaker, we had already requested the Central Government to bring necessary amendment in both Houses of Parliament after passing an unanimous Resolution in both the Houses of Legislature to change the name of the State from "Mysore" to "Karnataka". Article 3 of the Constitution states that the Bill seeking to alter the name of any State shall be done by introducing a Bill in the Parliament. Before introducing such a Bill, th President has to obtain the views of the State Legislature concerned within such period as may be specified under the reference. Accordingly, the Central Government have drafted a Bill called 'Mysore State (Alteration of Name) Bill, 1972" and have referred the same for getting necessary acceptance from both the Houses of legislature and to forward the same within three months with their (both the Houses) opinion.

I, therefore, request the Hon'ble members to accord their approval as is done arlier to change the name of the State as Karnataka.

WD 18730—GPB—550—30-10-73